# 3:18-4:1

# ಸಂಬಂಧಗಳಲ್ಲಿರುವ ಜವಾಬ್ದಾರಿಗಳು

3:18–4:1ರಲ್ಲಿನ ಕೌಟಂಬಿಕ ಸಂಬಂಧಗಳ ಕುರಿತ ತನ್ನ ಚರ್ಚೆಯಲ್ಲಿ, ಪೌಲನು ವಿವಿಧ ಗುಂಪುಗಳಿಗೆ ಬೋಧನೆಗಳನ್ನು ಮತ್ತು ಕ್ಲುಪ್ತ ವಿವರಣೆಗಳನ್ನು ಮುಂದಿಡುತ್ತಾನೆ.[1] ಆತನು ಅಧೀನರಾಗಿರತಕ್ಕ ಮೂರು ಗುಂಪುಗಳನ್ನು ಸಂಬೋಧಿಸಿ ಬರೆಯುತ್ತಾನೆ: ಹೆಂಡತಿಯರು (3:18), ಮಕ್ಕಳು (3:20), ಮತ್ತು ದಾಸರು (3:22–25). ಮೂರು ಬೇರೆ ಗುಂಪುಗಳಿಗೆ ಅವರ ಆರೈಕೆಯಲ್ಲಿರುವವರ ಕಡೆಗೆ ಅವರಿಗಿರಬೇಕಾದ ಜವಾಬ್ದಾರಿಗಳ ಬಗ್ಗೆ ಹೇಳಲ್ಪಟ್ಟಿರುತ್ತದೆ: ಅವರ ಹೆಂಡತಿಯರನ್ನು "ಪ್ರೀತಿಸಬೇಕು" ಎಂದು ಗಂಡಂದಿರಿಗೆ ಹೇಳಲ್ಪಟ್ಟಿದೆ (3:19); ತಂದೆಗಳಿಗೆ ಅವರ "ಮಕ್ಕಳನ್ನು ಕೆಣಕಿ ಮನಗುಂದಿಸಬೇಡಿರಿ" ಎಂದು ಸೂಚನೆ ನೀಡಲ್ಪಟ್ಟಿದೆ (3:21); ಮತ್ತು ಯಜಮಾನರಿಗೆ ಅವರ "ದಾಸರಿಗೆ ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ಮಾಡಿರಿ" ಎಂದು ಆಜ್ಞಾಪಿಸಲಾಗಿದೆ (4:1).

ಇತರರ ಮೇಲೆ ಅಧಿಕಾರವನ್ನು ಕೊಡಲ್ಪಟ್ಟಿರುವ ಗಂಡಂದಿರು, ತಂದೆಯಂದಿರು, ಮತ್ತು ಯಜಮಾನರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಾರದು, ಆದರೆ ತಮ್ಮ ಅಧೀನದಲ್ಲಿರುವವರ ಹಿತಕ್ಕಾಗಿ ಅದನ್ನು ಬಳಸಿಕೊಳ್ಳಬೇಕು. ದಾಸರು ಕುಟುಂಬಗಳ ಪರಿಸರದಲ್ಲಿ ಸೇವೆ ಮಾಡುತ್ತಿದ್ದದರಿಂದ ಅವರ ಬಗ್ಗೆ ಕೌಟಂಬಿಕ ಜವಾಬ್ದಾರಿಗಳಲ್ಲಿ ಉಲ್ಲೇಖಿಸಲಾಗಿರುತ್ತದೆ.

ಪೌಲನಿಂದ ನೇಮಿಸಲ್ಪಟ್ಟ ಮಾನದಂಡಕ್ಕನುಗುಣವಾಗಿ, ಅಧಿಕಾರದಲ್ಲಿರುವವರಿಗೆ ತಮ್ಮ ಕೈಕೆಳಗಿರುವವರ ಹಿತವನ್ನು ನೋಡಿಕೊಳ್ಳುವ ಜ ವಾಬ್ದಾರಿಯನ್ನು ಹೊಂದಿದ್ದು, ಪ್ರತಿಯಾಗಿ ಅವರು ತಮ್ಮ ಮೇಲೆ ಅಧಿಕಾರದಲ್ಲಿರುವವರಿಗೆ ಸಮರ್ಪಕವಾದ ಮರ್ಯಾದೆಯನ್ನು ತೋರಿಸಬೇಕಾಗಿತ್ತು. ಎರಡರಲ್ಲಿ ಯಾವ ಗುಂಪು ಸಹ ಮತ್ತೊಂದು ಗುಂಪಿನ ಭಾವಗಳನ್ನು ಮತ್ತು ಅಗತ್ಯತೆಗಳನ್ನು ಅಸಡ್ಡೆ ಮಾಡಕೂಡದಾಗಿತ್ತು. ಪ್ರತಿಯೊಂದು ಸಂಬಂಧದಲ್ಲಿಯೂ ಇಮ್ಮಡಿ ಜವಾಬ್ದಾರಿಯು ಇರುತ್ತದೆ. ಮೊದಲ ಹಾಗೂ ಅತ್ಯುನ್ನತ ಜವಾಬ್ದಾರಿಯು ಯೇಸುವಿನ ಕಡೆಗೆ ಆಗಿರುತ್ತದೆ, ಮತ್ತು ನಂತರ ಪರಸ್ಪರರ ಕಡೆಗಿನ ಜವಾಬ್ದಾರಿಯಾಗಿದೆ. ಪ್ರಾಥಮಿಕವಾದ ಗುರಿಯು ಯೇಸುವನ್ನು ಮೆಚ್ಚಿಸುವದೇ ಆಗಿರಬೇಕು; ಬೇರೆಯವರನ್ನು ಮೆಚ್ಚಿಸುವದು ನಂತರದ ಗುರಿಯಾಗಿರಬೇಕು.

# 3:18-4:1ರಲ್ಲಿ ಸಂಬಂಧಗಳಿಗೋಸ್ಕರ ಮಾರ್ಗಸೂಚಿಗಳು[2]

| ವಚನಗಳು | ಸಂಬೋದಿಸಲ್ಪಟ್ಟವರು | ಬೋಧನೆಗಳು | ವಿವರಣೆ |
|---|---|---|---|
| 3:18 | ಹೆಂಡತಿಯರು | ನಿಮ್ಮ ಗಂಡಂದಿರಿಗೆ ಅಧೀನರಾಗಿರಿ | ಕರ್ತನಲ್ಲಿರುವವರಿಗೆ |
| 3:19 | ಗಂಡಂದಿರು | ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ | |
| 3:20 | ಮಕ್ಕಳು | ನಿಮ್ಮ ತಂದೆತಾಯಿಗಳಿಗೆ ವಿಧೆಯರಾಗಿರಿ | ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದೆ |
| 3:21 | ತಂದೆಯಂದಿರು | ನಿಮ್ಮ ಮಕ್ಕಳನ್ನು ಕೆಣಕಬೇಡಿರಿ | ಹೀಗೆ ಅವರಿಗೆ ಮನಗುಂದಿಸಬೇಡಿರಿ |
| 3:22-25 | ದಾಸರು | ನಿಮ್ಮ ಯಜಮಾನರಿಗೆ ವಿಧೇಯರಾಗಿರಿ | ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ಅಲ್ಲ, ಆದರೆ ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಕೆಲಸಮಾಡಿರಿ. ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ |
| 4:1 | ಯಜಮಾನರು | ನಿಮ್ಮ ದಾಸರಿಗೆ ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ಮಾಡಿರಿ | ಪರಲೋಕದಲ್ಲಿ ನಿಮಗೂ ಯಜಮಾನನಿದ್ದಾನೆಂದು ತಿಳಿಯಿರಿ |

1 ಪೇತ್ರ 2:13-3:7ರಲ್ಲಿ ಅಧೀನಪಡಿಸಿಕೊಳ್ಳುವ ಕುರಿತು ಪೇತ್ರನು ಮಾಡುವ ಚರ್ಚೆಯಲ್ಲಿ, ಕ್ರೈಸ್ತರಿಗೆ ಮೊದಲು ಅಧಿಕಾರಿಗಳಿಗೂ ಅರಸರಿಗೂ ಅಧೀನರಾಗಬೇಕೆಂದು ಬುದ್ಧಿಹೇಳಲಾಗಿರುತ್ತದೆ (2:13-16). ತಾನು ಸ್ವತಃ ಅನುಭಿಸಿದ ರೀತಿಯಲ್ಲಿಯೇ, ಅನ್ಯಾಯವಾಗಿ ನಡೆದುಕೊಳ್ಳಲ್ಪಟ್ಟಾಗ್ಯೂ, ಯೇಸುವಿನ ಹಿಂಬಾಲಕರು ಅಧೀನರಾಗಿರತಕ್ಕದ್ದು (2:17-25). ಗಂಡಂದಿರು ವಿಶ್ವಾಸಿಗಳಲ್ಲದಿದ್ದಾಗ್ಯೂ, ಕ್ರೈಸ್ತ ಹೆಂಡತಿಯರು ಅವರಿಗೆ ಅಧೀನರಾಗಿರಬೇಕೆಂದು ಬೋಧಿಸಲ್ಪಟ್ಟಿದ್ದಾರೆ (3:1-6). ಹೆಂಡತಿಯು ಗಂಡನಿಗೆ ಅಧೀನಳಾಗಿರುವದು ಸರಿಯಾಗಿ ಸರ್ಕಾರಕ್ಕೆ ಅಧೀನವಾಗುವ ರೀತಿಯಲ್ಲಿಯೇ ಆಗಿರುವದಿಲ್ಲ. ಬದಲಾಗಿ, ಒಬ್ಬ ಹೆಂಡತಿಯು ತನ್ನ ಗಂಡನಿಗೆ ಮಾಡಿಕೊಳ್ಳುವ ಅಧೀನತೆಯು ಆತನ ಮೇಲೆ ಆಕೆಗಿರುವ ಪ್ರೀತಿ ಮತ್ತು ಅವರ ಸಂಬಂಧಗಳಲ್ಲಿರುವ ನಿಕಟತೆಯ ಮೇಲೆ ಆಧಾರವಾಗಿರುತ್ತದೆ.

ವಿವಿಧ ಸನ್ನಿವೇಶಗಳಲ್ಲಿ ಯೇಸುವೇ ಪರಿಪೂರ್ಣ ಮಾದರಿ ಆಗಿದ್ದಾನೆ. ಆತನು ಪರಲೋಕದ ತಂದೆಯ ವಿಧೇಯತೆಯುಳ್ಳ ಮಗನಾಗಿದ್ದನು (ಫಿಲಿಪ್ಪಿ 2:8; ಇಬ್ರಿಯ 5:8; 10:9) ಮತ್ತು ಆ ಕಾರಣದಿಂದ ಆತನು ಮಕ್ಕಳಿಗಾಗಿ ವಿಧೇಯತೆಯ ವಿಷಯದಲ್ಲಿ ಒಂದು ಉದಾಹರಣೆಯಾಗಿರುತ್ತಾನೆ. ಒಬ್ಬ ಯುವಕನಾಗಿ, ಆತನು ತನ್ನ ತಂದೆತಾಯಿಗಳಿಗೆ ವಿಧೇಯನಾಗಿದ್ದನು. ಈ ವಿಷಯದಲ್ಲಿ ನೋಡುವದಾದರೆ, ಹೆಚ್ಚಿನವನು ಕಡಿಮೆಯಾದವರಿಗೆ ಅಧೀನಪಟ್ಟು ಇದ್ದನು; ಇದು ಮಕ್ಕಳಿಗೆ, ಹೆಂಡತಿಯರಿಗೆ, ಮತ್ತು ದಾಸರಿಗೆ, ಅವರು ಅತ್ಯುನ್ನತ ಸಾಮರ್ಥ್ಯಗಳನ್ನು ಹೊಂದಿದವರಾಗಿದ್ದಾಗ್ಯೂ, ಅಧೀನತೆಯಿಂದಿರುವದಕ್ಕೆ ಒಂದು ಆದರ್ಶವಾಗಿರಬಲ್ಲದು. ಮರಣದ ನೋವನ್ನು ಎದುರಿಸಿದ ವೇಳೆ, ಯೇಸುವಿನ ಕಳಿಕಳಿಯೆಲ್ಲಾ ಆತನ ತಾಯಿಯ ಕುರಿತಾಗಿತ್ತು. ಈ ಕಳಕಳಿಯು ತಮ್ಮ ತಂದೆತಾಯಿಗಳನ್ನು ಪೋಷಣೆ ಮಾಡುವಂತೆ ಮಕ್ಕಳಿಗೂ ತಮ್ಮ ಹೆಂಡತಿಯರ ಬಗ್ಗೆ ಕಾಳಜಿ ವಹಿಸಿಕೊಳ್ಳುವಂತೆ ಗಂಡಂದಿರಿಗೂ ಒಂದು ಮಾದರಿಯಾಗುತ್ತದೆ. ಒಬ್ಬ ಯಜಮಾನನು ಹೇಗೆ ತನ್ನ ದಾಸರ ಸೇವೆಯನ್ನು ಮಾಡಬಹುದು ಎಂಬುದನ್ನು ದೃಷ್ಟಾಂತಪಡಿಸಲು ಯೇಸು ತನ್ನ ಶಿಷ್ಯರ ಕಾಲುಗಳನ್ನು ತೊಳೆದನು. ಯೇಸುವು "ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೆ" ಬಂದನು (ಮತ್ತಾಯ 20:28), ಅದು ದಾಸರಿಗೆ ಹಾಗೂ ತಂದೆತಾಯಿ ಮತ್ತು ಮಕ್ಕಳಿಗೆ ಸಹ ಅನುಸರಿಸಬೇಕಾದ ಒಂದು ಉದಾಹರಣೆಯಾಗಿರುತ್ತದೆ.

ಕೊಲೊಸ್ಸೆ 3:17ರ ಪ್ರಕಾರವಾಗಿ ಎಲ್ಲವನ್ನೂ "ಕರ್ತನ ಹೆಸರಿನಲ್ಲಿಯೇ" ಮಾಡಬೇಕಾಗಿರುವದರಿಂದ, ಪೌಲನು ಅಧೀನರಾಗಿರಬೇಕೆಂಬ ತನ್ನ ಬೇಡಿಕೆಯನ್ನು ಕರ್ತನ ಮೇಲೆ ಆಧಾರಗೊಳಿಸಿದನು. ಕೊಲೊಸ್ಸೆಯವರ ಪ್ರತಿಕ್ರಿಯೆಯು "ಕರ್ತನಲ್ಲಿರುವವರಿಗೆ ಯೋಗ್ಯವಾಗಿ" ಇರಬೇಕಿತ್ತು (3:18) ಮತ್ತು "ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿ" ಇರಬೇಕಿತ್ತು (3:20). ಅವರು ಕರ್ತನಿಗೆ ಭಯಪಡುವವರಾಗಿರಬೇಕಿತ್ತು (3:22) ಮತ್ತು ಪರಲೋಕದಲ್ಲಿ ತಮಗೆ ಒಬ್ಬ "ಯಜಮಾನನು" (κύριος, *kurios*, "ಕರ್ತನು") ಇದ್ದಾನೆಂಬುದನ್ನು ತಿಳಿದವರಾಗಿ (4:1) "ಕರ್ತನಿಗೋಸ್ಕರವೇ ಎಂದು" ಕೆಲಸ ಮಾಡಬೇಕಿತ್ತು (3:23). ಅವರ ಪ್ರತಿಫಲ ಅಥವಾ ದಂಡನೆಯು "ಕರ್ತನಿಂದ" ಬರುವಾಗಿದೆ ಎಂಬುದನ್ನು ಅವರು ಗ್ರಹಿಸಿಕೊಳ್ಳಬೇಕಾಗಿತ್ತು (3:24, 25).

ಸ್ತ್ರೀಯರು ತಮ್ಮ ಗಂಡಂದಿರಿಗೆ “ಎಲ್ಲಾ ವಿಷಯಗಳಲ್ಲಿ” ಅಧೀನರಾಗಿರಬೇಕು (ಎಫೆಸ 5:24). ಅದಕ್ಕೆ ತದ್ವಿರುದ್ಧವಾಗಿ, ದಾಸರಿಗೆ ಅಧೀನರಾಗಿರಬೇಕು ಎಂದು ಮಾತ್ರವಲ್ಲದೆ ವಿಧೇಯರಾಗಿರಬೇಕೆಂದು ಸಹ ಹೇಳಲಾಗಿರುತ್ತದೆ (ತೀತನಿಗೆ 2:9; 1 ಪೇತ್ರ 2:18). ಹೆಂಡತಿಯರ ವಿಷಯದಲ್ಲಿ “ವಿಧೇಯರಾಗಿರಿ” ಎಂಬುದರ ಬದಲಾಗಿ “ಅಧೀನರಾಗಿರಿ” ಎಂದು ಬಳಸಲ್ಪಟ್ಟಿರುವದರಿಂದ ಗೊತ್ತಾಗುವದೇನೆಂದರೆ ತಂದೆತಾಯಿ ಹಾಗೂ ಮಕ್ಕಳ ಸಂಬಂಧ ಅಥವಾ ಯಜಮಾನರು ಹಾಗೂ ದಾಸರ ಸಂಬಂಧಕ್ಕಿಂತಲೂ ಗಂಡಹೆಂಡರ ಸಂಬಂಧವು ವ್ಯತ್ಯಾಸವಾದದ್ದು ಎಂಬದೆ (3:20aರ ಮೇಲಿನ ಚರ್ಚೆಯನ್ನು ನೋಡಿರಿ). ತಮ್ಮ ಗಂಡಂದಿರ ಕಡೆಗೆ ಅಧೀನಕ್ಕೊಳಪಟ್ಟ ಗೌರವವನ್ನು ಹೊಂದಿರಬೇಕೆಂದು ಹೆಂಡತಿಯರಿಗೆ ಹೇಳಲ್ಪಟ್ಟಿದ್ದರೆ, ಮಕ್ಕಳಿಗೆ ಹಾಗೂ ದಾಸರಿಗೆ “ಎಲ್ಲಾ ವಿಷಯಗಳಲ್ಲಿ” ಗೌರವದಿಂದ ವಿಧೇಯರಾಗಿರಬೇಕೆಂದು ಹೇಳಲಾಗಿರುತ್ತದೆ (ಎಫೆಸ 6:1, 5; ಕೊಲೊಸ್ಸೆ 3:20, 22).

“ಅಧೀನರಾಗಿರಬೇಕು” ಅಥವಾ “ಒಳಪಟ್ಟವರಾಗಿರಬೇಕು” (ὑποτάσσω, *hupotassō*) ಎಂದು ಕೇವಲ ಹೆಂಡತಿಯರಿಗಷ್ಟೇ ಹೇಳಲ್ಪಟ್ಟಿರುವದಿಲ್ಲ. ಈ ಪದವು ಹೊಸ ಒಡಂಬಡಿಕೆಯಲ್ಲಿ ಯಾವ ಯಾವ ವಿಧದಲ್ಲಿ ಬಳಸಲ್ಪಟ್ಟಿದೆಯೆಂಬುದನ್ನು ನೋಡೋಣ:

ಲೂಕ 2:51 — ಯೇಸು ತನ್ನ ತಂದೆತಾಯಿಗಳಿಗೆ ಅಧೀನನಾಗಿದ್ದನು.
ಲೂಕ 10:17 — ಆತನು ದೆವ್ವಗಳನ್ನು ಓಡಿಸುವದಕ್ಕೆ ಅಧಿಕಾರವನ್ನು ಕೊಟ್ಟು ಕಳುಹಿಸಿದ ಎಪ್ಪತ್ತು ಮಂದಿ ಶಿಷ್ಯರಿಗೆ ದೆವ್ವಗಳು ಅಧೀನವಾಗಿದ್ದವು.
ರೋಮಾ 10:3 — ಯೆಹೂದ್ಯರು ದೇವರ ನೀತಿಗೆ ಅಧೀನರಾಗಲಿಲ್ಲ.
ರೋಮಾ 13:1, 5 — ಕ್ರೈಸ್ತರು ಸರ್ಕಾರಗಳಿಗೆ ಅಧೀನರಾಗಿರಬೇಕು (ನೋಡಿರಿ ತೀತನಿಗೆ 3:1; 1 ಪೇತ್ರ 2:13).
1 ಕೊರಿಂಥ 14:32 — ಪ್ರವಾದಿಗಳ ಆತ್ಮಗಳು ಪ್ರವಾದಿಗಳ ಸ್ವಾಧೀನದಲ್ಲಿವೆ.
1 ಕೊರಿಂಥ 14:34 — ಸ್ತ್ರೀಯರು ಧರ್ಮಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಅಧೀನರಾಗಿರಬೇಕು.
1 ಕೊರಿಂಥ 15:27 — ಸಮಸ್ತವೂ ಯೇಸುವಿಗೆ ಅಧೀನಮಾಡಲ್ಪಟ್ಟಿದೆ.
ಎಫೆಸ 5:21 — ಕ್ರೈಸ್ತರು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಬೇಕು.
ಎಫೆಸ 5:24 — ಸಭೆಯು ಕ್ರಿಸ್ತನಿಗೆ ಅಧೀನವಾಗಿದೆ.
ಫಿಲಿಪ್ಪಿ 3:21 — ಯೇಸುವು ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳುವನು.
ತೀತನಿಗೆ 2:9 — ದಾಸರು ತಮ್ಮ ಯಜಮಾನರಿಗೆ ಅಧೀನರಾಗಿದ್ದಾರೆ (ನೋಡಿರಿ 1 ಪೇತ್ರ 2:18).
ಇಬ್ರಿಯ 12:9 — ಕ್ರೈಸ್ತರು ದೇವರಿಗೆ ಒಳಪಟ್ಟು ಜೀವಿಸಬೇಕು.
1 ಪೇತ್ರ 3:22 — ದೇವದೂತರು ಹಾಗೂ ಅಧಿಕಾರಗಳು ಕ್ರಿಸ್ತನಿಗೆ ಸ್ವಾಧೀನವಾಗಿವೆ.
1 ಪೇತ್ರ 5:5 — ಕಿರಿಯ ಕ್ರೈಸ್ತರು ಹಿರಿಯರಿಗೆ ಅಧೀನರಾಗಿರಬೇಕು.

ದೇವರ ದೃಷ್ಟಿಯಲ್ಲಿ ಆತ್ಮೀಕ ಸಮಾನತೆಯಿದೆಯೆಂದ ಮಾತ್ರಕ್ಕೆ (ಗಲಾತ್ಯ 3:28)

ತಮಗೆ ಎಲ್ಲಾ ಮಾನವ ಸಂಬಂಧಗಳಲ್ಲಿಯೂ ಅದೇ ಸಮಾನತೆಯಿರುತ್ತದೆಂದು ಕ್ರೈಸ್ತರು ಭಾವಿಸಿಕೊಳ್ಳಬಾರದು. ಯಜಮಾನನು ದಾಸರಿಗೆ, ತಂದೆತಾಯಿಗಳು ತಮ್ಮ ಮಕ್ಕಳಿಗೆ, ಅಥವಾ ಗಂಡನು ಹೆಂಡತಿಗೆ ಅಧೀನನಾಗಿರಬೇಕಾದ ನಿರ್ಬಂಧದಲ್ಲಿರುವದಿಲ್ಲ. ಬದಲಾಗಿ, ಆ ಎಲ್ಲಾ ವಿಷಯಗಳಲ್ಲಿ ಹಿಮ್ಮೊಗವಾಗಿರುವದೇ ಸತ್ಯವೆಂಬದಾಗಿ ಯೇಸು ನಿಷ್ಕರ್ಷೆ ಮಾಡಿರುತ್ತಾನೆ. ಆತನಿಗೆ ಮೆಚ್ಚಿಕೆಯನ್ನುಂಟು ಮಾಡಬೇಕೆಂದರೆ, ಆತನು ಸೂಚಿಸಿರುವ ಕ್ರಮವನ್ನು ಗೌರವಿಸತಕ್ಕದ್ದು.

3:12-14ರಲ್ಲಿ ವೈಯಕ್ತಿಕ ಚಾರಿತ್ರ್ಯದ ಗುಣಗಳಿಗಾಗಿ ಒಂದು ಅಸ್ತಿವಾರವನ್ನು ಹಾಕಿದವನಾಗಿ, ಪೌಲನು ನಂತರ ಆ ಮೂಲತತ್ವಗಳನ್ನು ಕೊಲೊಸ್ಸೆಯವರ ದೈನಂದಿನ ಕೌಟಂಬಿಕ ಸಂಬಂಧಗಳಿಗೆ ಅನ್ವಯಗೊಳಿಸುತ್ತಾನೆ. ಇವೆಲ್ಲವನ್ನೂ "ಕರ್ತನಾದ ಯೇಸುವಿನ ಹೆಸರಿನಲ್ಲಿಯೇ" (3:17), ಅಂದರೆ, ಆತನ ಚಿತ್ತಕ್ಕನುಸಾರವಾಗಿ ನಡಿಸಬೇಕಾಗಿತ್ತು.

ತಂದೆತಾಯಿಗಳು ಹಾಗೂ ಮಕ್ಕಳು ಕ್ರೋಧ, ಕೋಪ, ಮತ್ಸರ, ದೂಷಣೆ, ದುರ್ಭಾಷೆ, ಮತ್ತು ಸುಳ್ಳಾಡುವಿಕೆ ಇವುಗಳಿಂದ ದೂರವಿರುವದಾದಲ್ಲಿ, ಕುಟುಂಬ ವ್ಯವಸ್ಥೆಯು ಇಮ್ಮಡಿಯಾಗಿ ಆಶೀರ್ವದಿಸಲ್ಪಟ್ಟದ್ದಾಗಿರುತ್ತದೆ (3:8, 9). ಒಂದು ಸಂತೋಷದ ಕುಟುಂಬಕ್ಕೆ ಈ ದುರ್ಗುಣಗಳಿಲ್ಲದಿರುವಿಕೆ ಅವಶ್ಯವಾಗಿರುವದು ಮಾತ್ರವೇ ಅಲ್ಲ, ಆದರೆ ಕೆಲವೊಂದು ಸದ್ಗುಣಗಳು — ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ದೀರ್ಘಶಾಂತಿ, ಸೈರಣೆ, ಕ್ಷಮಾಪಣೆ, ಮತ್ತು ಪ್ರೀತಿ (3:12-14) — ಸಹ ಇರಬೇಕಾದ ಅವಶ್ಯಕತೆಯಿರುತ್ತದೆ. ಕೊನೆಯಲ್ಲಿರುವ ಸದ್ಗುಣವಾದ ಪ್ರೀತಿಯು, ಕುಟುಂಬದಲ್ಲಿನ ನಕಾರಾತ್ಮಕವನ್ನು ನಿರ್ಮೂಲನೆ ಮಾಡುವದಕ್ಕೆ ಸಹಾಯವಾಗುತ್ತದೆ ಮತ್ತು ಕುಟುಂಬವನ್ನು ಸಾಮರಸ್ಯ ಹಾಗೂ ಮಮತೆಯಲ್ಲಿ ಒಂದಾಗಿ ಬಂಧಿಸುವದಕ್ಕಾಗಿ ಸಕಾರಾತ್ಮಕವನ್ನು ಎದ್ದು ಕಾಣುವಂತೆ ಮಾಡುತ್ತದೆ.

## ಹೆಂಡತಿಯರು ಗಂಡಂದಿರಿಗೆ (3:18)

**18ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ; ಇದು ಕರ್ತನಲ್ಲಿರುವವರಿಗೆ ಯೋಗ್ಯವಾಗಿದೆ.**

### "ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ"

ಸ್ತ್ರೀಯರು "ಎಲ್ಲಾ ವಿಷಯಗಳಲ್ಲಿ" ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (ಎಫೆಸ 5:24). ಪೌಲನು **ಹೆಂಡತಿಯರು** ನಿರಂತರವಾಗಿ ತಮ್ಮ ಅಧೀನರಾಗಿರಬೇಕೆಂಬುದನ್ನು ಸೂಚಿಸುವಂಥ ವರ್ತಮಾನ ಕಾಲರೂಪದ ಆಜ್ಞಾರ್ಥಕವನ್ನು (ὑποτάσσεσθε, *hupotassesthe*, from ὑποτάσσω, *hupotassō*) ಬಳಸಿ, ಅವರಿಗೆ [ತಮ್ಮ] **ಗಂಡಂದಿರಿಗೆ ಅಧೀನರಾಗಿರ್ರಿ** ಎಂದು ನಿರ್ದೇಶಿಸುತ್ತಾನೆ. *Hupotassō* ಪದದ ಅರ್ಥನಿರೂಪಣೆಯನ್ನು Robert G. Bratcher ಮತ್ತು Eugene A. Nidaರು ಈ ರೀತಿಯಲ್ಲಿ ನೀಡುತ್ತಾರೆ:

> ಸೇನೆಯ ಅಧಿಕಾರ ಶ್ರೇಣಿಯಲ್ಲಿ ಕೈಕೆಳಗಿರುವವನು ತನ್ನ ಮೇಲಾಧಿಕಾರಿಗೆ

> ನಡೆದುಕೊಳ್ಳುವದನ್ನು ಸೂಚಿಸುವ ಮಿಲಿಟರಿ ಸನ್ನಿವೇಶದಲ್ಲಿ ಬಳಸಲ್ಪಡುವ ಪದ [ಇದಾಗಿರುತ್ತದೆ]. ಇದು ಎಫೆಸ 5:22, ತೀತನಿಗೆ 2:5, 1 ಪೇತ್ರ 3:1ರಲ್ಲಿ ಗಂಡಂದಿರಿಗೆ ಹೆಂಡತಿಯು ಹೊಂದಿರುವ ಸಂಬಂಧದಲ್ಲಿ, ತೀತನಿಗೆ 2:9, 1 ಪೇತ್ರ 2:13ರಲ್ಲಿ ಯಜಮಾನರಿಗೆ ದಾಸರಾಗಿರುವ ಸಂಬಂಧ, ರೋಮಾ 13:1ರಲ್ಲಿ ಸರ್ಕಾರದ ಅಧಿಕಾರಿಗಳ ಕಡೆಗೆ ಜನರು ಹೊಂದಿರುವ ಸಂಬಂಧವನ್ನು ಸೂಚಿಸಿ ಬಳಸಲ್ಪಟ್ಟಿರುತ್ತದೆ.[3]

3:18ರಲ್ಲಿ ಲೈಂಗಿಕವಾಗಿ ಅಧೀನಪಡಿಸಿಕೊಳ್ಳುವ ಬಗ್ಗೆಯಷ್ಟೇ ಮುಖ್ಯವಾಗಿ ಹೇಳಲಾಗಿರುತ್ತದೆಂಬ ಯೋಚನೆಯನ್ನು ಮಾಡದಿರುವಂತೆ ಒಂದು ಎಚ್ಚರಿಕೆಯನ್ನು ಇಲ್ಲಿ ಕೊಡಬೇಕಾಗಿರುತ್ತದೆ. ಅದು ಸಹ ಸೇರ್ಪಡೆಯಾಗಿರುತ್ತದಾದರೂ, ಅಷ್ಟಕ್ಕೇ "ಅಧೀನವಾಗಿರುವಿಕೆ" ಉದ್ದೇಶವು ಮುಗಿದು ಹೋಗುವದಿಲ್ಲ. ಗಂಡ ಹಾಗೂ ಹೆಂಡತಿಯ ನಡುವಿನ ಲೈಂಗಿಕ ಸಂಬಂಧದ ಕುರಿತು ಪೌಲನು ಬೇರೊಂದು ಕಡೆಯಲ್ಲಿ ಮಾತಾಡಿರುತ್ತಾನೆ (1 ಕೊರಿಂಥ 7:3-5).

ಹೆಂಡತಿಯು ತನ್ನ ಗಂಡನ ಚಿತ್ತಕ್ಕೆ ಸ್ವಯಿಚ್ಛೆಯಿಂದ ಮತ್ತು ಮನಃಪೂರ್ವಕವಾಗಿ ಒಡಂಬಡಬೇಕೆಂಬುದನ್ನು ಬೈಬಲಿನಲ್ಲಿರುವ ಉದಾಹರಣೆಗಳು ದೃಷ್ಟಾಂತಗೊಳಿಸುತ್ತವೆ. 1 ಪೇತ್ರ 3:5, 6ರಲ್ಲಿ ಪೇತ್ರನು ಉದಾಹರಣೆಯಾಗಿ ಹೇಳಿದ ಸಾರಳು, ಅಬ್ರಹಾಮನಿಗೆ "ಅಧೀನಳಾಗಿ" ಇದ್ದಳು. ಅಲ್ಲದೆ, ಆಕೆಯು ಆತನನ್ನು "ಕರ್ತನೇ" ಎಂದು ಕರೆಯುವವಳಾಗಿ, ಆತನಿಗೆ "ವಿಧೇಯಳು" ಸಹ ಆಗಿದ್ದಳು. ὑπακούω (*hupakouō*) ಎಂಬದರಿಂದ ಬಂದಿರುವ "ವಿಧೇಯವಾಗು" ಎಂಬ ಪದವು, ಮಕ್ಕಳು ಹೇಗೆ ತಮ್ಮ ಹೆತ್ತವರಿಗೆ "ವಿಧೇಯ"ರಾಗುವರೋ ಮತ್ತು ದಾಸರು ಹೇಗೆ ಯಜಮಾನರಿಗೆ "ವಿಧೇಯ"ರಾಗುವರೋ ಆ ವಿಧದಲ್ಲಿ ವಿಧೇಯರಾಗುವಂತೆ ಸ್ತ್ರೀಯರಿಗೆ ಎಂದಿಗೂ ಆಜ್ಞಾಪಿಸಲ್ಪಟ್ಟಿರುವದಿಲ್ಲ.

ಇನ್ನು ಕೆಲವು ವಾಕ್ಯಭಾಗಗಳನ್ನು ನೋಡೋಣ. ಎಫೆಸ 5:22-24 ಹೀಗೆ ಹೇಳುತ್ತದೆ,

> ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. . . . ಅದಿರಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನ ರಾಗಿರಬೇಕು.

ತೀತನಿಗೆ 2:5 ಹೇಳುವದೇನೆಂದರೆ ಹೆಂಡತಿಯರು "ವಾಕ್ಯಕ್ಕೆ ದೂಷಣೆಯಾಗದಂತೆ . . . ಗಂಡಂದಿರಿಗೆ ಅಧೀನರು" ಆಗಿರಬೇಕೆಂಬದೆ. ಅದೇ ರೀತಿಯಲ್ಲಿಯೇ, ಪೇತ್ರನು ಹೀಗೆ ಬರೆಯುತ್ತಾನೆ, "ಅದೇ ರೀತಿಯಾಗಿ ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ. . ." ಮತ್ತು "ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆಯಿಟ್ಟ ಭಕ್ತೆಯರಾದ ಸ್ತ್ರೀಯರು ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. ಅವರು ತಮ್ಮ ಗಂಡಂದಿರಿಗೆ ಅಧೀನರಾಗಿದ್ದು" (1 ಪೇತ್ರ 3:1, 5).

ಸ್ತ್ರೀಯರಿಗೆ ದೊಡ್ಡ ಸ್ವಾತಂತ್ರ್ಯವು ಕೊಡಲ್ಪಟ್ಟಿತ್ತು ಮತ್ತು ಅವರ ಯೇಸುವಿನ ಮೂಲಕ ಗಂಡಂದಿರಿಂದ ಗೌರವ ಹಾಗೂ ಪ್ರೀತಿಗೆ ಪಾತ್ರರಾಗುವ ಸ್ಥಾನಕ್ಕೆ ಏರಿಸಲ್ಪಟ್ಟಿದ್ದರು. ತಮ್ಮ ಕುಟುಂಬಗಳ ಪೋಷಣೆಯ ಭಾರ ಮತ್ತು ಜವಾಬ್ದಾರಿಯು ಹೆಂಡತಿಯರಿಗಲ್ಲದೆ,

ಗಂಡಂದಿರಿಗೆ ಕೊಡಲ್ಪಟ್ಟದ್ದಾಗಿದೆ. ಈ ಭಾರವು ತಮ್ಮ ಮೇಲೆ ಹಾಕಲ್ಪಟ್ಟಿರುವದಿಲ್ಲ ಎಂಬುದಕ್ಕಾಗಿ ಕ್ರೈಸ್ತ ಸ್ತ್ರೀಯರು ಕೃತಜ್ಞತೆಯುಳ್ಳವರಾಗಿರಬೇಕು. ಅವರು ಕುಟುಂಬದ ಅಗತ್ಯತೆಗಳನ್ನು ನೋಡಿಕೊಳ್ಳಬೇಕಾದ ಚಿಂತೆಗೀಡು ಮಾಡುವ ಕೆಲಸವನ್ನು ಭುಜದ ಮೇಲೆ ಹೊತ್ತುಕೊಳ್ಳಲು ಪ್ರಯತ್ನಿಸಬಾರದು, ಅವುಗಳನ್ನೆಲ್ಲಾ ಗಂಡಂದಿರಿಗೆ ಬಿಡತಕ್ಕದ್ದು. ಗಂಡಂದಿರಿಂದ ದೊರಕುವ ಪೋಷಣೆಗೆ ಕೃತಜ್ಞತೆಯಾಗಿ, ಅವರು ಸಹಕಾರವನ್ನು ನೋಡುವವರಾಗಬೇಕು ಮತ್ತು ಜಗ್ಗದ ಮನಸ್ಸಿನವರು, ಹಠಮಾರಿಗಳು, ಅಥವಾ ಮೊಂಡುತನವುಳ್ಳವರು ಆಗಿರಬಾರದು.

## "ಇದು ಕರ್ತನಲ್ಲಿರುವವರಿಗೆ ಯೋಗ್ಯವಾಗಿದೆ"

**ಕರ್ತನಲ್ಲಿರುವವರಿಗೆ ಯೋಗ್ಯವಾಗಿದೆ** ಎಂಬ ಪದಗುಚ್ಛವು ತಮ್ಮ ಗಂಡಂದಿರಿಗೆ ಅಧೀನರಾಗಿರುವ ವಿಷಯದಲ್ಲಿ ಸ್ತ್ರೀಯರು ವಿವೇಚಿಸುವವರಾಗಿರಬೇಕಾದ ಅಗತ್ಯವನ್ನು ವ್ಯಕ್ತಪಡಿಸುತ್ತದೆ. ಅವರ ಅಧೀನವಾಗಿರುವಿಕೆಯು ಕ್ರೈಸ್ತ ಸ್ತ್ರೀಯರಿಗೆ ಯಾವ ಸೂಕ್ತವಾದ ರೀತಿಯಲ್ಲಿರಬೇಕು. ಅವರು ತಮ್ಮ ಗಂಡಂದಿರ ಮನವಿಗಳಿಗೆ ಒಳಪಡುವವರಾಗಿರಬೇಕು, ಆದರೆ ಯೇಸುವಿನ ಚಿತ್ತಕ್ಕೆ ವಿರುದ್ಧವಾದ ಮನವಿಗಳಿಗೆ ಅಲ್ಲ. ಅಂಥವುಗಳು "ಯೋಗ್ಯವಾಗಿ" (ἀνῆκεν, *anēken*) ಇರುವದಿಲ್ಲ, ಅದರರ್ಥವು ಸೂಕ್ತ ಮತ್ತು ಸಮರ್ಪಕವಾದದ್ದು ಆಗಿರುವದಿಲ್ಲ. ಎಫೆಸ 5:4ರಲ್ಲಿ ಪೌಲನು ಸೂಕ್ತವಾದ ಸಂಭಾಷಣೆಯ ವಿಷಯವಾಗಿ ಈ ಪದವನ್ನು ನಕಾರಾತ್ಮಕವಾಗಿ ಮತ್ತು ತಾನು ಮಾಡಿದ ಮನವಿಯನ್ನು ನೆರವೇರಿಸುವನೆಂದು ಫಿಲೆಮೋನನಲ್ಲಿ ತನಗಿರುವ ಭರವಸವನ್ನು ಸೂಚಿಸುವದರಲ್ಲಿ ಸಕಾರಾತ್ಮಕವಾಗಿ ಬಳಸಿರುತ್ತಾನೆ (ಫಿಲೆಮೋನ 8, 9).

ಪೌಲನು ಎಫೆಸ 5:24ರಲ್ಲಿ ಬಳಸಿರುವ "ಎಲ್ಲಾ ವಿಷಯಗಳಲ್ಲಿ" ಎಂಬದರ ಅರ್ಥವು "ಕರ್ತನಲ್ಲಿ" ಇರುವ ಸೀಮಿತ ವರ್ಗಕ್ಕೆ ಸೇರಿದ "ಎಲ್ಲಾ ವಿಷಯಗಳಲ್ಲಿ" ಎಂದಾಗಿರತಕ್ಕದ್ದು. ಗಂಡನೊಬ್ಬನು ತನ್ನ ಹೆಂಡತಿಗೆ ದೇವರ ಚಿತ್ತವನ್ನು ಮೀರುವಂತೆ ಹೇಳುವದಾದಲ್ಲಿ, ಆಕೆಯು ಆತನಿಗಿಂತಲೂ ದೇವರಿಗೇ ವಿಧೇಯಳಾಗತಕ್ಕದ್ದು (ಅಪೊಸ್ತಲರ ಕೃತ್ಯಗಳು 5:29). ಆಕೆಯು "ಕರ್ತನಲ್ಲಿ" ಇರುವ ನಂಬಿಕೆಗೆ ಹೊಂದಾಣಿಕೆಯಾಗಿರುವಂಥ ಮನವಿಗಳಿಗೆ ಮಾತ್ರವೇ ಆಕೆಯು ಅಧೀನಳಾಗಿರಬೇಕು.

ಹೆಂಡತಿಯರು ಮನಃಪೂರ್ವಕ ಅಧೀನತೆಯನ್ನು ತೋರ್ಪಡಿಸುವ ರೀತಿಯಲ್ಲಿ ತಮ್ಮ ಗಂಡಂದಿರಿಗೆ ಪ್ರತಿಕ್ರಿಯಿಸುವವರಾಗಿರಬೇಕು. ಹೊಟ್ಟೆಯುರಿ, ಹಗೆತನ, ಅಥವಾ ಒಲ್ಲದ ಮನಸ್ಸಿನಿಂದ ಅಧೀನವಾಗುವದು "ಯೋಗ್ಯವಾಗಿ" ಇರುವದಿಲ್ಲ. ಒಬ್ಬ ಹೆಂಡತಿಯು ತನ್ನ ಗಂಡನ ವಿಷಯದಲ್ಲಿ 3:8, 9ರಲ್ಲಿ ಉಲ್ಲೇಖಿಸಲಾಗಿರುವ ಯಾವದೇ ದುರ್ಗುಣಗಳನ್ನಿಟ್ಟುಕೊಂಡಿರಬಾರದು. ಬದಲಾಗಿ, ಅವಳು ತನ್ನ ಕ್ರಿಯೆಗಳ ಮೂಲಕ 3:12-14ರಲ್ಲಿ ಪಟ್ಟಿ ಮಾಡಲಾಗಿರುವ ಸದ್ಗುಣಗಳನ್ನು ತೋರ್ಪಡಿಸುವವಳಾಗಿರಬೇಕು. ಇವುಗಳು ಯೇಸುವನ್ನು ಪ್ರೀತಿಸುವ ಮತ್ತು ಸೇವೆ ಮಾಡಲಿಚ್ಛಿಸುವವರ ಗುಣಲಕ್ಷಣಗಳಾಗಿರುತ್ತವೆ. ಈ ವಿಧದಲ್ಲಿ ಜೀವಿಸುವ ಮೂಲಕ, ಅವಳು ತನ್ನ ಪರಲೋಕದ ತಂದೆಗೆ ವಿಧೇಯನಾದ ಕ್ರಿಸ್ತನಲ್ಲಿದ್ದಂಥ ಅಧೀನವಾಗುವ ಮನೋಭಾವವನ್ನು ಪ್ರತಿಫಲನಗೊಳಿಸುವವಳಾಗುತ್ತಾಳೆ (ಫಿಲಿಪ್ಪಿ 2:8; ಇಬ್ರಿಯ 5:8). ಅದನ್ನು ಬಿಟ್ಟು ಬೇರೆ ಯಾವದೇ ರೀತಿಯಲ್ಲಿ ಪ್ರತಿಕ್ರಿಯಿಸುವದು ಒಬ್ಬ ಪ್ರೀತಿಯುಳ್ಳ ಕ್ರೈಸ್ತ ಹೆಂಡತಿಗೆ ಸೂಕ್ತವಾದದ್ದಾಗಿರುವದಿಲ್ಲ.

ಪೌಲನು ಈ ವಾಕ್ಯಭಾಗದಲ್ಲಿ ಒಬ್ಬ ವಿಶ್ವಾಸಿಯಲ್ಲದ ಗಂಡನ ಕಡೆಗೆ ಹೆಂಡತಿಗಿರಬೇಕಾದ ಜವಾಬ್ದಾರಿಗಳ ಬಗ್ಗೆ ಚರ್ಚಿಸಲಿಲ್ಲ. ಇಂಥ ಸನ್ನಿವೇಶದಲ್ಲಿ ಹೆಂಡತಿಯರು ಹೇಗೆ ನಡೆದುಕೊಳ್ಳಬೇಕೆಂಬ ಬೋಧನೆಗಳನ್ನು 1 ಕೊರಿಂಥ 7:12-16 ಮತ್ತು 1 ಪೇತ್ರ 3:1-6ರಲ್ಲಿ ಕೊಡಲಾಗಿರುತ್ತದೆ. ವಿಶ್ವಾಸಿಗಳಲ್ಲದವರ ಹೆಂಡತಿಯರಿಗೆ ಹೀಗೆ ಹೇಳಲಾಗಿರುತ್ತದೆ, ". . . ನಿಮ್ಮ ಗಂಡಂದಿರಿಗೆ ಅಧೀನರಾಗಿರಿ. ಅವರಲ್ಲಿ ಕೆಲವರು ದೇವರ ವಾಕ್ಯಕ್ಕೆ ಅವಿಧೇಯರಾಗಿದ್ದರೂ ನೀವು ನಿರ್ಮಲರಾಗಿಯೂ ಭಯಭರಿತರಾಗಿಯೂ ನಡೆದುಕೊಳ್ಳುವದನ್ನು ಅವರು ನೋಡಿ ವಾಕ್ಯೋಪದೇಶವಿಲ್ಲದೆ ತಮ್ಮ ಹೆಂಡತಿಯರಾದ ನಿಮ್ಮ ನಡತೆಯಿಂದಲೇ ಸನ್ಮಾರ್ಗಕ್ಕೆ ಬಂದಾರು" (1 ಪೇತ್ರ 3:1, 2).

## ಗಂಡಂದಿರು ಹೆಂಡತಿಯರಿಗೆ (3:19)

**19ಪುರುಷರೇ, ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ, ಅವರಿಗೆ ನಿಷ್ಠುರವಾಗಿರಬೇಡಿರಿ.**

### "ಪುರುಷರೇ, ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ, ಅವರಿಗೆ ನಿಷ್ಠುರವಾಗಿರಬೇಡಿರಿ"

ಗಂಡನು ಒಬ್ಬ ದರ್ಪಿಷ್ಟ ನಿರಂಕುಶವಾದಿಯಂತಿರದೆ ಕನಿಕರ ಹಾಗೂ ಪ್ರೀತಿಯನ್ನು ತೋರುವ ಗಂಡನಾಗಿದ್ದಲ್ಲಿ ಅಧೀನವಾಗಿರುವ ಹೆಂಡತಿಯ ಪಾತ್ರವು ಇನ್ನಷ್ಟು ಸುಲಭವಾಗುವದು. ತಮ್ಮ ಹೆಂಡತಿಯರ ಕಡೆಗೆ ಗಂಡಂದಿರ ಕ್ರಿಯೆಗಳು ಪ್ರೀತಿಯ ನಿಯಂತ್ರಣದಲ್ಲಿರಬೇಕು. ಗಂಡನು ಹೆಂದತಿಯೊಂದಿಗೆ ಹೊಂದಿರುವ ಸಂಬಂಧದೊಳಗೆ **ಪ್ರೀತಿ** (ἀγαπάω, *agapaō*; ಒಂದು ವರ್ತಮಾನಕಾಲ ರೂಪದ ಆಜ್ಞಾರ್ಥಕ) ಆಧಿಪತ್ಯ ನಡಿಸುವ ಅಂಶವಾಗಿರತಕ್ಕದ್ದು. ಆತನು ಆಕೆಯ ವಿರುದ್ಧ **ನಿಷ್ಠುರವಾಗಿ** ಇರಬಾರದು. "ನಿಷ್ಠುರವಾಗಿ" (πικραίνω, *pikrainō*) ಹೊಸ ಒಡಂಬಡಿಕೆಯೊಳಗೆ ಬೇರೊಂದು ಕಡೆ ಪ್ರಕಟನೆ ಪುಸ್ತಕದಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ (8:11; 10:9, 10).

ವಿವಾಹದ ಮುಂಚೆ ಇರುತ್ತಿದ್ದಂಥ ಅದೇ ಪ್ರೀತಿಯ ಮನೋಭಾವವು ವಿವಾಹದ ನಂತರವೂ ಮುಂದುವರೆಯತಕ್ಕದ್ದು. ವಿವಾಹದ ಸಮಾರಂಭವು ಗಂಡ ಮತ್ತು ಹೆಂಡತಿಯ ನಡುವಿನ ಪ್ರೀತಿಯ ಸಂಬಂಧಕ್ಕೆ ಅಂತ್ಯವಾಗುವದಿಲ್ಲ. ಈ ಪದಗುಚ್ಛವನ್ನು "ಪುರುಷರೇ, ನಿಮ್ಮ ಸ್ತ್ರೀಯರನ್ನು ಪ್ರೀತಿಸಿರಿ" ಎಂದು ಅನುವಾದಿಸಬಹುದು. **ಗಂಡಂದಿರು**, ಎಂಬುದಕ್ಕಾಗಿರುವ ಗ್ರೀಕ್ ಪದವು ἄνδρες (*andres*), "ಪುರುಷರು" ಅಥವಾ "ಗಂಡಂದಿರು" ಎಂಬವುಗಳಲ್ಲಿ ಯಾವದನ್ನಾದರೂ ಸೂಚಿಸಬಹುದಾಗಿದೆ, ಮತ್ತು **ಹೆಂಡತಿಯರು** ಎಂಬುದರ ಅನುವಾದಿತ ಪದವಾದ γυναῖκες (*gunaikes*) ಎಂಬುದು "ಸ್ತ್ರೀಯರು" ಅಥವಾ "ಹೆಂಡತಿಯರು" ಎಂಬವುಗಳಲ್ಲಿ ಯಾವದನ್ನಾದರೂ ಸೂಚಿಸುವದಾಗಿದೆ. ಈ ಪದಗಳು ಹೇಗೆ ಅನುವಾದಿಸಲ್ಪಡಬೇಕೆಂಬುದನ್ನು ಸನ್ನಿವೇಶವು ನಿರ್ಣಯಿಸುವದಾಗಿದೆ. ಈ ಸಂದರ್ಭದಲ್ಲಿ ಇರುವಂತೆ ತೋರುವ ಅರ್ಥವು ಗಂಡಂದಿರು ತನ್ನ ಹೆಂಡತಿಯರನ್ನು ಪ್ರೀತಿಸಬೇಕು ಎಂದಾಗಿರುತ್ತದೆ.

ಪೌಲನು ಇಲ್ಲಿ ಮತ್ತು ಎಫೆಸ 5:25ರಲ್ಲಿ ಬರೆದ ಪ್ರಕಾರ, ಗಂಡ-ಹೆಂಡತಿಯ ಸಂಬಂಧದಲ್ಲಿ ಪ್ರಭಲವಾಗಿರಬೇಕಾದ ಭಾವ ಎಂದರೆ ಗಂಡನ ಕಡೆಯಿಂದ "ಪ್ರೀತಿ" ತೋರಿ

ಬರಬೇಕೆಂಬುದೆ. ಹೊಸ ಒಡಂಬಡಿಕೆಯಲ್ಲಿ ತಮ್ಮ ಗಂಡಂದಿರನ್ನು "ಪ್ರೀತಿಸಿರಿ" (*agapaō*) ಎಂದು ಹೆಂಡತಿಯರಿಗೆ ಎಲ್ಲಿಯೂ ಹೇಳಲ್ಪಟ್ಟಿಲ್ಲ. ತೀತನಿಗೆ 2:4ರಲ್ಲಿ ಹಿರಿಯ ಸ್ತ್ರೀಯರು ಕಿರಿಯ ಸ್ತ್ರೀಯರಿಗೆ ತಮ್ಮ ಗಂಡಂದಿನ್ನು "ಪ್ರೀತಿಸುವಂತೆ" ಕಲಿಸಿ ಕೊಡಬೇಕು ಎಂದು ಹೇಳಲಾಗಿದೆ. ಇಲ್ಲಿ ಬಳಸಲಾಗಿರುವ ಸಂಯುಕ್ತ ಪದವು φιλάνδρες (*philandres*), ಇದು *phileō* ("ಪ್ರೀತಿ") ಮತ್ತು *anēr* ("ಗಂಡ") ಎಂಬ ಪದಗಳಿಂದ ಬಂದದ್ದಾಗಿದೆ.

ಪೌಲನು 1 ಕೊರಿಂಥ 13:4-8ರಲ್ಲಿ ಪ್ರೀತಿಯು ಹೇಗೆ ಒಬ್ಬನನ್ನು ಕ್ರಿಯೆಗೆ ನಡಿಸುತ್ತದೆಂಬದರ ಕುರಿತು ಒಂದು ಅತ್ಯುತ್ತಮವಾದ ವರ್ಣನೆಯನ್ನು ಬರೆದಿರುತ್ತಾನೆ. ಜಿಪುಣತನ, ಹಠಮಾರಿತನ, ಮತ್ತು ಅಧಿಕಾರ ಚಲಾಯಿಸುವವನಾಗಿರುವದೇ ಪ್ರೀತಿಯನ್ನು ತೋರಿಸುವ ದಾರಿಯೆಂಬದಾಗಿ ನಂಬಿರುವ ಗಂಡಂದಿರು ಆಗಾಗ ಈ ವಾಕ್ಯಭಾಗವನ್ನು ಓದಬೇಕು ಮತ್ತು ತಮ್ಮ ಹೆಂಡಿತಿಯರಿಗೆ ಅದರಂತೆಯೇ ಪ್ರೀತಿಯನ್ನು ತೋರಿಸುವದಕ್ಕೆ ಅಪೇಕ್ಷಿಸಬೇಕು.

ಒಬ್ಬ ಗಂಡನು ತನ್ನ ಹೆಂಡತಿಯೊಂದಿಗೆ ಕೆರಳಿದವನು ಅಥವಾ "ನಿಷ್ಠುರನು" ಆಗುವಾಗ, ಆತನು ಶಕ್ತಿಯನ್ನು ಬಳಸಿ ತನ್ನ ಕ್ರೋಧ ಮತ್ತು ಹತಾಶೆಯನ್ನು ವ್ಯಕ್ತಪಡಿಸಬೇಕೆಂಬ ಒಲವು ತೋರಬಹುದು. ಗಂಡಂದಿರು ತಮ್ಮ ಹೆಂಡತಿಯರನ್ನು ಅರ್ಥಮಾಡಿಕೊಳ್ಳುವವರಾಗಿ, ಅವರು ಪುರುಷರಿಗಿಂತ ಬಲಹೀನರೆಂಬುದನ್ನು ಗ್ರಹಿಸಿಕೊಳ್ಳಬೇಕು ಎಂಬದಾಗಿ ಪೇತ್ರನು ಬರೆಯುತ್ತಾನೆ (1 ಪೇತ್ರ 3:7).

ಪ್ರೀತಿಸುವವನು ಮತ್ತು ದಯೆಯುಳ್ಳವನು ಆಗಿದ್ದು ಕೆಟ್ಟದ್ದಕ್ಕೆ ಪ್ರತಿಯಾಗಿ ಕೆಟ್ಟದ್ದನ್ನು ಮಾಡದವನಾಗಿರುವ ಮೂಲಕ (ರೋಮಾ 12:17), ಒಬ್ಬ ಗಂಡನು ತನ್ನ ಹೆಂಡತಿಯೊಂದಿಗೆ ಒಂದು ಸಮಾಧಾನಕರವಾದ ಹಾಗೂ ಸಾಮರಸ್ಯವುಳ್ಳ ಸಂಬಂಧವನ್ನು ನಿರ್ಮಿಸಿಕೊಳ್ಳಬಲ್ಲನು. ಆತನು ತನ್ನ ಹೆಂಡತಿಯ ಹೃದಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಇಬ್ಬರು ಸಹ ತಮ್ಮ ಭಾವಗಳನ್ನು ಹಂಚಿಕೊಂಡು ನಿಕಟ ಬಂಧದಿಂದ ಕೂಡಿದವರಾಗಬೇಕು, ದಯೆ ಹಾಗೂ ಸೌಹಾರ್ದತೆಯ ಮೂಲಕ ಪ್ರೀತಿಯಲ್ಲಿ ಒಟ್ಟಾಗಿ ಸೆಳೆಯಲ್ಪಟ್ಟವರಾಗಬೇಕು. 3:8, 9ರಲ್ಲಿ ಪಟ್ಟಿ ಮಾಡಲಾಗಿರುವ ಪಾಪಗಳನ್ನು ನಿರ್ಮೂಲನೆ ಮಾಡಿ 3:12-14ರಲ್ಲಿರುವ ಗುಣಗಳನ್ನು ಬೆಳೆಸಿಕೊಳ್ಳಬೇಕೆಂಬುದು ಗಂಡಂದಿರಿಗೆ ಹಾಗೂ ಹೆಂಡತಿಯರಿಗೆ ಸಹ ಅನ್ವಯವಾಗುತ್ತದೆ.

ಗಂಡನು ತನ್ನ ಹೆಂಡತಿಯ ಮೇಲೆ ಅಧಿಕಾರ ನಡಿಸುವವನಾಗಿ ಆಕೆಯು ತನಗೆ ಅಧೀನಳಾಗಬೇಕೆಂದು ಒತ್ತಾಯಿಸುವಂತೆ ಪ್ರೋತ್ಸಾಹಿಸಲ್ಪಟ್ಟಿರುವದಿಲ್ಲ. ಬದಲಾಗಿ, ಆತನಿಗೆ ತನ್ನ ಹೆಂಡತಿಯನ್ನು ಪ್ರೀತಿಸಬೇಕೆಂದು ಹೇಳಲಾಗಿದೆ. ಹೆಂಡತಿಗೆ ಪ್ರೀತಿ ತೋರಿಸುವಂಥ ತಲೆಯಾಗಿರುವವನಾದ, ಗಂಡನು ಸಭೆಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟ ಕ್ರಿಸ್ತನ ಹಾಗೆಯೇ, ಹೆಂಡತಿಗೆ ತನ್ನನ್ನು ಒಪ್ಪಿಸಿಕೊಡುವದಾದರೆ ದಾಂಪತ್ಯದ ಸಂಬಂಧವು ಇರತಕ್ಕ ರೀತಿಯಲ್ಲಿಯೇ ಮಾರ್ಪಡುವದಾಗಿರುತ್ತದೆ (ಎಫೆಸ 5:25). ಪ್ರೀತಿಯು ಹೆಂಡತಿಯನ್ನು ಒಂದು "ವಸ್ತು" ಎಂಬಂತೆ ಕಾಣಲ್ಪಡುವದರಿಂದ ಮೇಲಕ್ಕೆತ್ತಲ್ಪಟ್ಟು ಪ್ರೀತ್ಯಾದರದ ಸಂಗಾತಿಯಾಗಿ ಕಾಣಲ್ಪಡುವಂತೆ ಮಾಡುವದು, ಆಕೆಗೋಸ್ಕರ ಗಂಡನು ಸಂತೋಷದಿಂದ ತನಗೆ ಸಾಧ್ಯವಾದದ್ದನ್ನು ಮಾಡುವವನಾಗಿ ತನ್ನ ಅತ್ಯಂಥ ದೊಡ್ಡ ನಿಷ್ಠೆಯನ್ನು ತೋರಿಸುವವನಾಗುವನು.

ಹೆಂಡತಿಯು ಕೇವಲ ಗಂಡನ ಲೈಂಗಿಕ ಅಭಿಲಾಷೆಗಳನ್ನು ತೃಪ್ತಿಪಡಿಸುವದಕ್ಕಾಗಿ ಮಾತ್ರವೇ ಇರುವದಾಗಿದ್ದರೆ, ಪೌಲನು ಗ್ರೀಕ್ ಕ್ರಿಯಾಪದವಾದ *eraō* (ಅದು "ಲೈಂಗಿಕ ಪ್ರೀತಿ" ಎಂಬುದಕ್ಕಾಗಿರುವ ಪದ) ಎಂಬ ಪದವನ್ನು ಬರೆದಿರುತ್ತಿದ್ದನು. ಬದಲಾಗಿ, ಆತನು ಒಂದು ತ್ಯಾಗಮಯ ಹಾಗೂ ತನ್ನನ್ನೇ ಒಪ್ಪಿಸಿಕೊಳ್ಳುವ ಪ್ರೀತಿಯಾಗಿರುವ, *agapaō*ದ ಬಗ್ಗೆ ಮಾತಾಡಿದನು. ಗಂಡನು ತನ್ನ ಸ್ವಂತ ಹಿತಕ್ಕಿಂತಲೂ ಹೆಂಡತಿಯ ಹಿತಾಸಕ್ತಿಯನ್ನು ಪ್ರಾಮುಖ್ಯತೆಯನ್ನು ಕೊಡಬೇಕು ಎಂಬದನ್ನು ಇದು ತೋರಿಸಿ ಕೊಡುತ್ತದೆ.

## ಮಕ್ಕಳು ತಂದೆತಾಯಿಗಳಿಗೆ (3:20)

**[20]ಮಕ್ಕಳೇ, ಎಲ್ಲಾ ವಿಷಯಗಳಲ್ಲಿ ನಿಮ್ಮ ತಂದೆತಾಯಿಗಳ ಮಾತನ್ನು ಕೇಳಿರಿ; ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದೆ.**

### "ಮಕ್ಕಳೇ, ಎಲ್ಲಾ ವಿಷಯಗಳಲ್ಲಿ ನಿಮ್ಮ ತಂದೆತಾಯಿಗಳ ಮಾತನ್ನು ಕೇಳಿರಿ"

**ಮಕ್ಕಳು** (τέκνα, *tekna*) ಎಂಬದರ ಅರ್ಥವು "ಸಂತಾನ" ಅಥವಾ "ಸಂತತಿಯವರು" ಎಂದಾಗಿದೆ. ಅದು ನಿರ್ದಿಷ್ಟವಾಗಿ "ಕೂಸುಗಳು," "ಶಿಶುಗಳು," "ಬಾಲ್ಯದ ಮಕ್ಕಳು," ಅಥವಾ "ಪುತ್ರರು" ಎಂಬದಾಗಿ ತಿಳಿಸುವದಿಲ್ಲ. ಈ ಪದದಲ್ಲಿ ವಯಸ್ಸಾಗಲಿ ಲಿಂಗವಾಗಲಿ ವ್ಯಕ್ತಗೊಳಿಸಲ್ಪಟ್ಟಿರುವದಿಲ್ಲ. ಸ್ಪಷ್ಟವಾಗಿರುವ ಪ್ರಕಾರ, ಪೌಲನು ಇಲ್ಲಿ ಮನೆಯಲ್ಲಿರುವ ಯಾವದೇ ವಯಸ್ಸಿನ ಯಾವದೇ ಮಕ್ಕಳನ್ನು ಸೂಚಿಸುತ್ತಿದ್ದಾನೆ.

ದೇವರ ಆಜ್ಞೆಗಳ ವಿಷಯದಲ್ಲಿ ಪೌಲನು ಬಳಸಿದ ಅರ್ಥನಿರೂಪಣೆಯ ವಿಷಯದಲ್ಲಿ Peter T. O'Brienನು ಒಂದು ಪ್ರಾಮುಖ್ಯವಾದ ಅಭಿಪ್ರಾಯವನ್ನು ತಿಳಿಸುತ್ತಾನೆ: ಸ್ತ್ರೀಯರಿಗೆ ಕೊಡಲಾಗಿರುವ ಅಪ್ಪಣೆಗಿಂತಲೂ ಮಕ್ಕಳು ಹಾಗೂ ದಾಸರಿಗೆ ನೀಡಿರುವ ಆಜ್ಞೆಯು ಬಲವಾಗಿರುತ್ತದೆ. ಸ್ತ್ರೀಯರಿಗೆ "ಸ್ವಯಂಪ್ರೇರಿತ ಅಧೀನತೆ"ಯನ್ನು ತೋರುವಂತೆ ಕರೆ ನೀಡಲಾಗಿರುತ್ತದೆ, ಅದೇ ವೇಳೆಯಲ್ಲಿ ಮಕ್ಕಳಿಂದ ಮತ್ತು ದಾಸರಿಂದ "ಸಂಪೂರ್ಣವಾದ ವಿಧೇಯತೆ"ಯನ್ನು ಕೇಳಲಾಗಿರುತ್ತದೆ.[4]

ಮಕ್ಕಳು **ಎಲ್ಲಾ ವಿಷಯಗಳಲ್ಲಿ** [γονεῖς, *goneis*] [ತಮ್ಮ] **ತಂದೆತಾಯಿಗಳ ಮಾತನ್ನು ಕೇಳಬೇಕು** ಎಂದು ಪೌಲನು ಹೇಳುತ್ತಾನೆ. ಮಕ್ಕಳಿಗೆ ಹಾಗೂ ದಾಸರಿಗೆ ಕೊಡಲಾಗಿರುವ ಈ ಆಜ್ಞೆಯು ಮಿತಿಯಲ್ಲದ್ದು ಅಥವಾ ನಿರ್ಬಂಧರಹಿತವಾದದ್ದು ಎಂಬದಾಗಿ ಪರಿಗಣಿಸಲ್ಪಡಕೂಡದು. "ಎಲ್ಲಾ" ಎಂಬುದು ನ್ಯಾಯಯುತವಾಗಿರುವ "ಎಲ್ಲಾ ವಿಷಯಗಳನ್ನು" ಒಳಗೊಂಡಿರುತ್ತದೆ. ಭಕ್ತಿಹೀನ ತಂದೆತಾಯಿಗಳ ಬೇಡಿಕೆಗಳು ಹಾಗೂ ದೇಶದ ಕಾನೂನಿನ ನಡುವೆ ಘರ್ಷಣೆ ಏರ್ಪಟ್ಟರೆ, ಮಕ್ಕಳು ಸರ್ಕಾರಿ ಕಾನೂನುಗಳಿಗೇ ವಿಧೇಯರಾಗತಕ್ಕದ್ದು (ರೋಮಾ 13:1-5; 1 ಪೇತ್ರ 2:13). ಸರ್ಕಾರಕ್ಕೆ ತೋರುವ ಹೊಣೆಗಾರಿಕೆಗಿಂತಲೂ ಉನ್ನತವಾದ ಇನ್ನೊಂದು ಹೊಣೆಗಾರಿಕೆಯಿರುತ್ತದೆ: ದೇವರ ಆಜ್ಞೆಗಳಿಗೆ ವಿಧೇಯರಾಗಬೇಕೆಂಬ ಹೊಣೆಗಾರಿಕೆ (ಅಪೊಸ್ತಲರ ಕೃತ್ಯಗಳು 4:19; 5:29).

ತಮ್ಮ ತಂದೆತಾಯಿಗಳು ಕೇಳುವ ಯಾವ ಕಾರ್ಯಗಳಿಗೆ ವಿಧೇಯರಾಗಬೇಕೆಂಬುದನ್ನು ಮಕ್ಕಳು ಹೆಕ್ಕಿ ಆಯ್ದುಕೊಳ್ಳಬಾರದು. ಬದಲಾಗಿ, ಮಕ್ಕಳು

ತಮ್ಮ ಹೆತ್ತವರ ಚಿತ್ತವನ್ನು ಮಾಡತಕ್ಕದ್ದು ಮತ್ತು ತಮ್ಮ ಸ್ವಂತ ತರ್ಕ ಅಥವಾ ಇಷ್ಟಗಳ ಪ್ರಕಾರ ನಡೆದುಕೊಳ್ಳಬಾರದು. ಅದೇ ಸಮಯದಲ್ಲಿ, ತಾವು ಮಕ್ಕಳಿಂದ ಕೇಳುವಂತ ಬೇಡಿಕೆಗಳು ಮಕ್ಕಳ ಸಂಪೂರ್ಣ ಹಿತವನ್ನು ಪರಿಗಣನೆಗೆ ತೆಗೆದುಕೊಳ್ಳದೆಯೇ ಸ್ವಾರ್ಥದಿಂದ ಕೂಡಿರದಂತೆ ನೋಡಿಕೊಳ್ಳುವ ಜವಾಬ್ದಾರಿಯು ಕ್ರೈಸ್ತ ತಂದೆತಾಯಿಗಳ ಮೇಲಿರುತ್ತದೆ.

ನಿಯಮದ ಪ್ರಕಾರ, ವಿಧೇಯತೆಯುಳ್ಳ ಮಕ್ಕಳು ದೀರ್ಘಾಯುಷ್ಯವನ್ನು ಅನಂದಿಸುತ್ತಾರೆ ಯಾಕೆಂದರೆ ದೇವರು ಅವರನ್ನು ಆಶೀರ್ವದಿಸುತ್ತಾನೆ, ಮತ್ತು ಸರ್ವಸಾಧಾರಣವಾಗಿ, ಇನ್ನೊಂದು ಕಾರಣವೆಂದರೆ ಅವರು ಆರೋಗ್ಯಕರವಾಗಿ ಮನೋಭಾವಗಳನ್ನು ಹಾಗೂ ಶೈಲಿಗಳನ್ನು ಬೆಳೆಸಿಕೊಳ್ಳುತ್ತಾರೆ. ಪೌಲನು ಹೀಗೆ ಬರೆಯುತ್ತಾನೆ, "ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆತಾಯಿಗಳ ಮಾತನ್ನು ಕೇಳಬೇಕು; ಇದು ಧರ್ಮ. ವಾಗ್ದಾನಸಹಿತವಾದ ಮೊದಲನೆಯ ಆಜ್ಞೆಯನ್ನು ಕೇಳಿರಿ – ನಿನ್ನ ತಂದೆತಾಯಿಗಳನ್ನೂ ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ" (ಎಫೆಸ 6:1-3). ತಮ್ಮ ಬಾಲ್ಯದಲ್ಲಿಯೇ ತಂದೆತಾಯಿಗಳನ್ನು ಸನ್ಮಾನಿಸುವದಕ್ಕೆ ಕಲಿಯುವ ಮಕ್ಕಳು ಕಾರಾಗೃಹಗಳಿಗೆ ಅಥವಾ ಜೈಲುಗಳ ಪಾಲಾಗುವದು ವಿರಳವಾಗಿರುತ್ತದೆ. ಎಲ್ಲಿ ತಂದೆತಾಯಿಗಳಿಗೆ ಸನ್ಮಾನವಿರುವದಿಲ್ಲವೋ ಅಲ್ಲಿ ಸಮಾಜಕ್ಕೆ ಅಥವಾ ಅಧಿಕಾರದಲ್ಲಿರುವವರಿಗೆ ಸನ್ಮಾನವು ಇರುವದಿಲ್ಲ. ಮನೆಯಲ್ಲಿ ಅಗೌರವವಿರುವದಾದರೆ ಒಂದು ಭ್ರಷ್ಟ ಸಮಾಜವು ಬೆಳವಣಿಗೆಗೊಳ್ಳುವದು. ಒಂದು ಭ್ರಷ್ಟಗೊಂಡ ಸಮಾಜದ ಪಾಪಗಳೊಳಗೆ ಪೌಲನು ತಂದೆತಾಯಿಗಳಿಗೆ ಅವಿಧೇಯವಾಗುವದನ್ನು ಸೇರ್ಪಡೆಗೊಳಿಸಿದನು (ರೋಮಾ 1:28-32; 2 ತಿಮೊಥೆ 3:2-5).

ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ, ಮಕ್ಕಳು ತಮ್ಮ ತಂದೆತಾಯಿಗಳನ್ನು ಸನ್ಮಾನಿಸಬೇಕೆಂದು ಅಪೇಕ್ಷಿಸಲಾಗಿತ್ತು (ವಿಮೋಚನಕಾಂಡ 20:12; ಯಾಜಕಕಾಂಡ 19:3). ತಮ್ಮ ತಂದೆತಾಯಿಗಳನ್ನು ಶಪಿಸಿದವರನ್ನು ಮರಣ ದಂಡನೆಗೆ ಗುರಿಪಡಿಸಬೇಕಿತ್ತು (ವಿಮೋಚನಕಾಂಡ 21:17; ಯಾಜಕಕಾಂಡ 20:9; ಧರ್ಮೋಪದೇಶಕಾಂಡ 21:18-21). ಶಾಸ್ತ್ರಿಗಳು ಮತ್ತು ಫರಿಸಾಯರು ತನಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ವೇಳೆಯಲ್ಲಿ ಯೇಸು ಈ ತೀರ್ಪನ್ನು ಉಲ್ಲೇಖಿಸಿದನು (ಮತ್ತಾಯ 15:4).

ಮಕ್ಕಳು ತಮ್ಮ ತಂದೆತಾಯಿಗಳಿಗೆ ವಿಧೇಯರಾಗುವ ಅಗತ್ಯವಿಲ್ಲದಂಥ ಒಂದು ವಯಸ್ಸು ಅಥವಾ ಪರಿಸ್ಥಿತಿಯು ಇರುತ್ತದೋ? ಬೈಬಲ್ ಎಲ್ಲಿಯೂ ಈ ಪ್ರಶ್ನೆಗೆ ಉತ್ತರಿಸುವಂತೆ ತೋರುವದಿಲ್ಲ. "ಮಕ್ಕಳು" ಎಂಬುದು ತಮ್ಮ ಬೆಳವಣಿಗೆಯ ವಯಸ್ಸುಗಳಲ್ಲಿ ಹೆತ್ತವರ ಮನೆಯಲ್ಲಿರುವವರನ್ನು ಸೂಚಿಸುತ್ತದಾದ್ದರಿಂದ, ಪ್ರಾಯಸ್ಥರಾಗಿ ತಮ್ಮ ಪೋಷಣೆಯನ್ನು ತಾವೇ ಮಾಡಿಕೊಳ್ಳುತ್ತಿರುವವರ ವಿಷಯವೇನು? ಮಕ್ಕಳು ತಂದೆತಾಯಿಗಳ ಜೊತೆಯಲ್ಲಿರುವ ತನಕ ಮತ್ತು ಅವರಿಂದ ಆರ್ಥಿಕವಾಗಿ ಸಹಾಯವನ್ನು ಪಡೆಯುತ್ತಿರುವಷ್ಟು ಕಾಲ ಅವರಿಗೆ ವಿಧೇಯರಾಗಿರತಕ್ಕದ್ದು. ಅವರಿಗೆ ತಮ್ಮದೇ ಆಗಿರುವ ಮನೆ ಹಾಗೂ ಕುಟುಂಬಗಳಿರುವ ಹೊತ್ತಿಗೆ, ಅವರು ಇನ್ನು ಮೇಲೆ ವಿಧೇಯರಾಗಿರುವದನ್ನು ಅಪೇಕ್ಷಿಸಲಾಗುವದಿಲ್ಲ. ಹೇಗೂ, ವಯಸ್ಸು ಅಥವಾ ಪರಿಸ್ಥಿತಿ ಏನೇ ಆಗಿದ್ದರೂ, ಮಕ್ಕಳು

ಯಾವಾಗಲೂ ತಮ್ಮ ತಂದೆತಾಯಿಗಳನ್ನು ಸನ್ಮಾನಿಸತಕ್ಕದ್ದು.

### "ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದೆ"

ಮಕ್ಕಳು ತಮ್ಮ ತಂದೆತಾಯಿಗಳಿಗೆ ವಿಧೇಯರಾಗಿರತಕ್ಕದ್ದು ಯಾಕೆಂದರೆ ಅದು **ಕರ್ತನಿಗೆ** (ἐν κυρίῳ, *en kuriō*, ಅಕ್ಷರಶಃ "ಕರ್ತನಲ್ಲಿ") ಮೆಚ್ಚಿಕೆಯಾಗಿದೆ. ತಂದೆತಾಯಿಗಳಿಗೆ ವಿಧೇಯರಾಗುವಂಥದ್ದು ಕರ್ತನಿಗೆ ಒಳಪಟ್ಟದ್ದಾಗಿರಬೇಕು. ಮಕ್ಕಳ ಅಂತಿಮ ಗುರಿಯು ದೇವರನ್ನು ಮೆಚ್ಚಿಸುವದೇ ಆಗಿರಬೇಕು. ದೇವರಿಗೆ ವಿಧೇಯರಾಗಲು ಪ್ರಯತ್ನಿಸುವವರು ತಮ್ಮ ತಂದೆತಾಯಿಗಳಿಗೆ ವಿಧೇಯರಾಗಲು ಮತ್ತು ಮೆಚ್ಚಿಸಲು ನೋಡುವದು, ಮತ್ತು ಭಕ್ತಿಯುಳ್ಳ ತಂದೆತಾಯಿಗಳಿಗೆ ವಿಧೇಯರಾಗುವವರು ದೇವರನ್ನು ಸಹ ಮೆಚ್ಚಿಸುವವರಾಗಿರುತ್ತಾರೆ.

## ತಂದೆಗಳು ಮಕ್ಕಳಿಗೆ (3:21)

**21ತಂದೆಗಳೇ, ನಿಮ್ಮ ಮಕ್ಕಳನ್ನು ಕೆಣಕಿ ಅವರಿಗೆ ಮನಗುಂದಿಸಬೇಡಿರಿ.**

### "ತಂದೆಗಳೇ, ನಿಮ್ಮ ಮಕ್ಕಳನ್ನು ಕೆಣಕಿ ಅವರಿಗೆ ಮನಗುಂದಿಸಬೇಡಿರಿ"

ಸಾಮಾನ್ಯವಾಗಿ **ತಂದೆಗಳು** ಎಂಬ ಅರ್ಥವನ್ನು ಕೊಡುವ πατέρες (*pateres*) ಎಂಬ ಪದವನ್ನು ಬಳಸುವ ಮೂಲಕ, ಪೌಲನು ತಾಯಿಗಳನ್ನು ಹೊರಗಿಟ್ಟಿದ್ದನೋ, ಅಥವಾ ಇಬ್ರಿಯ 11:23ರಲ್ಲಿ ಈ ಪದವು ಅನುವಾದಿಸಲ್ಪಟ್ಟಿರುವ ಪ್ರಕಾರವಾಗಿ, ತಂದೆತಾಯಿಗಳಿಬ್ಬರನ್ನೂ ಸೇರಿಸಿ ಹೇಳಿದನೋ? ಆತನು ಗಂಡಂದಿರ ಬಗ್ಗೆ ಚರ್ಚಿಸುತ್ತಿದ್ದನಾದ್ದರಿಂದ, ಬಹುಶಃ ಈ ಅಪ್ಪಣೆಯು ತಂದೆಗಳಿಗೆ ಮಾತ್ರವೇ ಆಗಿತ್ತು. ಹೇಗೂ, ತಂದೆತಾಯಿಗಳಿಬ್ಬರೂ **ಮಕ್ಕಳನ್ನು** ಶಿಕ್ಷಿತರನ್ನಾಗಿಸುವದರಲ್ಲಿ ತೊಡಗಿಸಿಕೊಳ್ಳತಕ್ಕದ್ದು. ಈ ಕಾರಣಕ್ಕಾಗಿಯೇ 20ನೇ ವಚನದಲ್ಲಿ ಮಕ್ಕಳು ತಂದೆತಾಯಿಗಳ ಮಾತನ್ನು ಕೇಳಬೇಕೆಂದು ಪೌಲನು ಬರೆಯುತ್ತಾನೆ.

ಮಕ್ಕಳು ವಿಧೇಯರಾಗಿರಬೇಕಾದರೂ, ತಂದೆಯು ತನ್ನ ಮಕ್ಕಳಿಗೆ ಬೇಸರವುಂಟಾಗುವಷ್ಟರ ಮಟ್ಟಿಗೆ ಅತಿಯಾಗಿ ಅಪೇಕ್ಷಿಸುವವನು ಮತ್ತು ನ್ಯಾಯವಲ್ಲದ ರೀತಿಯಲ್ಲಿ ನಡೆದುಕೊಳ್ಳಬಾರದು. **ಕೆಣಕಿ** (ἐρεθίζω, *erethizō*) ಎಂಬುದರ ಅರ್ಥವು "ಕಿರಿಕಿರಿಯುಂಟು ಮಾಡು, ರೊಚ್ಚಿಗೆಬ್ಬಿಸು, ನಿಷ್ಠುರಗೊಳಿಸು, ರೇಗಿಸು, ಅಥವಾ ಮುನಿಸಿಕೊಳ್ಳುವಂತೆ ಮಾಡು" ಎಂದಾಗಿರುತ್ತದೆ. ಪೌಲನು ಈ ಪದವನ್ನು ಇನ್ನು ಒಂದೇ ಸಾರಿ ಬಳಸಿದ್ದು, ಅಲ್ಲಿ ಇತರರನ್ನು ಪ್ರೋತ್ಸಾಹಿಸುವ ಕುರಿತು ಸಕಾರಾತ್ಮಕ ಅರ್ಥದಲ್ಲಿ ಬಳಸಿರುತ್ತಾನೆ (2 ಕೊರಿಂಥ 9:2, "ಪ್ರೇರಿಸಿತು"). ಆತನು ಕೊಲೊಸ್ಸೆ 3:21ರಲ್ಲಿ ಹೆತ್ತವರಿಬ್ಬರನ್ನೂ ಸೂಚಿಸಿ ಹೇಳಲಿಲ್ಲವಾದಾಗ್ಯೂ, ತಾಯಂದಿರಿಗೆ ಮಕ್ಕಳಲ್ಲಿ ಕೆಣಕುವ ಹಕ್ಕು ಇರುತ್ತದೆಂಬ ಪರೋಕ್ಷ ಅರ್ಥದಲ್ಲಿ ಆತನು ಹೇಳಲಿಲ್ಲ.

ತಂದೆಗಳು ತಮ್ಮ ಕಠೋರವಾದ ಆಜ್ಞೆಗಳಿಂದ, ಚಿಕ್ಕ ಚಿಕ್ಕ ತಪ್ಪುಗಳಿಗೆ ಸಹ ತಿದ್ದುವದಕ್ಕೆ ಹೋಗುವದರಿಂದ, ಬಹಳ ಕಷ್ಟಕರವಾದ ಬೇಡಿಕೆಗಳನ್ನಿಡುವ ಮೂಲಕ,

ಅಥವಾ ಕಠಿಣವಾಗಿ ಶಿಕ್ಷೆಯನ್ನು ಕೊಡುವ ಮೂಲಕ ಮಕ್ಕಳನ್ನು ಕೆಣಕಬಹುದಾಗಿದೆ. ಅವರಿಗೆ ಸಿಡುಕಿನ ಬಗ್ಗೆ ಶಿಸ್ತುಗೊಳಿಸುವಿಕೆ ಮತ್ತು ಪ್ರೀತಿ ಹಾಗೂ ದಯೆಯಿಂದ ಕೂಡಿದ ಕಟ್ಟುನಿಟ್ಟಾಗಿರುವಿಕೆಯ ಅಗತ್ಯವಿರುತ್ತದೆ. ತಂದೆಗಳು ಯಾವಾಗಲೂ ಕಾಡುತ್ತಾ ಇರುವವರು, ಟೀಕಿಸುವವರು, ಮುನಿಸಿಕೊಳ್ಳುವಂತೆ ಮಾಡುವವರು, ನಿರಂತರವಾಗಿ ಗೊಣಗುತ್ತಿರುವವರು, ಅಥವಾ ತಮ್ಮ ಮಕ್ಕಳಲ್ಲಿ ಕ್ರೋಧವುಂಟಾಗುವಂತೆ ರೊಚ್ಚಿಗೆಬ್ಬಿಸುವವರು ಆಗಿರಬಾರದು. ಮಕ್ಕಳನ್ನು ಅವಮಾನಗೊಳಿಸುವದು, ಬೇರೆಯರೊಂದಿಗೆ ಅವರನ್ನು ಸಮಾನವಾಗಿ ಕಾಣದಿರುವದು, ಅಥವಾ ಅರ್ಥಮಾಡಿಕೊಳ್ಳಲು ವಿಫಲರಾಗುವದು ಅವರನ್ನು ಬಹಳವಾಗಿ ನಿರಾಶೆಗೊಳಿಸಬಲ್ಲದು.

ಗತಕಾಲದಲ್ಲಿ ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿಸುವದಕ್ಕೆ ದೇವರು ತಂದೆಗಳನ್ನೇ ಹೊಣೆಗಾರರನ್ನಾಗಿಸಿದ್ದನು. ಆತನು ತನ್ನ ವಿಶೇಷ ಜನಾಂಗದ ತಂದೆಯಾಗಿರುವದಕ್ಕೆ ಆತನು ಅಬ್ರಹಾಮನನ್ನು ಆರಿಸಿಕೊಂಡನು ಯಾಕೆಂದರೆ ಆತನು ತನ್ನ ಮಕ್ಕಳನ್ನು ಕರ್ತನ ಮಾರ್ಗದಲ್ಲಿ ನಡೆಯುವಂತೆ ತರಬೇತಿಗೊಳಿಸಲಿದ್ದನು (ಆದಿಕಾಂಡ 18:19). ಏಲಿಯ ಪುತ್ರರ ಭ್ರಷ್ಟತನಕ್ಕೆ ದೇವರು ಏಲಿಯನ್ನೇ ಹೊಣೆಗಾರನನ್ನಾಗಿಸಿದನು (1 ಸಮುವೇಲ 2:27-29; 3:13, 14). ಪೌಲನು ತಂದೆಗಳಿಗೆ ತಮ್ಮ ಮಕ್ಕಳಿಗೆ "ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ" ಮಾಡಬೇಕೆಂದು ಸೂಚಿಸಿದನು (ಎಫೆಸ 6:4).

ಒಬ್ಬ ಮಗುವು ಮುಂದೆ ಹೇಗೆ ಜೀವಿಸಬೇಕೆಂಬುದನ್ನು ನಿಷ್ಕರ್ಷೆಗೊಳಿಸಲು ಆತನನ್ನು ತರಬೇತುಗೊಳಿಸುವದು ಪ್ರಾಮುಖ್ಯವಾಗಿರುತ್ತದೆ. ತಪ್ಪುಗಳನ್ನು ಎತ್ತಿತೋರಿಸುವಂಥ ನಕಾರಾತ್ಮಕ ದಾರಿಯನ್ನನುಸರಿಸುವದು ಅವಶ್ಯಕವಾದದ್ದು, ಆದರೆ ಅದು ಮಾತ್ರವೇ ಇರುವದಾದಲ್ಲಿ ಮಕ್ಕಳನ್ನು ನಿರಾಶೆಗೊಳಿಸುವದು. ಅವರಿಗೆ ಸಕಾರಾತ್ಮಕ ಬೋಧನೆ ಮತ್ತು ಒಂದು ನಿಜವಾದ ಉದಾಹರಣೆಯ ಮೂಲಕ ಸರಿಯಾದ ಜೀವನವನ್ನು ನಡಿಸುವಂತೆ ಮಾರ್ಗದರ್ಶನ ನೀಡುವ ಅಗತ್ಯವಿರುತ್ತದೆ. ಮಕ್ಕಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಒಬ್ಬ ಒಳ್ಳೇ ತಂದೆಯು ಒಳ್ಳೇ ಕ್ರಿಯೆಗಳಲ್ಲಿ ಮಕ್ಕಳಿಗೆ ಅನುಮೋದನೆ ಮತ್ತು ಸಂತೃಪ್ತಿಯನ್ನು ವ್ಯಕ್ತಪಡಿಸುವನು.

ಒಂದು ಮಗುವಿನ ಗುಣನಡತೆಯನ್ನು ಅಭಿವೃದ್ಧಿಗೊಳಿಸುವಂತೆ ತಂದೆತಾಯಿಗಳಿಗೆ ಸಹಾಯ ಮಾಡುವದಕ್ಕೆ ಪ್ರಯೋಜನವುಳ್ಳ ಸಲಹೆಯು ಜ್ಞಾನೋಕ್ತಿಗಳಲ್ಲಿ ಸಿಕ್ಕುತ್ತದೆ. (ನೋಡಿರಿ 13:24; 19:18; 22:6, 15; 23:13, 14; 29:15, 17.)

ತಂದೆತಾಯಿಗಳ ಕಡೆಯಿಂದ ಮಕ್ಕಳನ್ನು ಅತಿ ಕಠೋರವಾಗಿ ನಡೆದುಕೊಳ್ಳುವಿಕೆ ಅಥವಾ ತಿಳುವಳಿಕೆಯ ಕೊರತೆಯು ಇರುವದಾದಲ್ಲಿ ಅದು ಮಕ್ಕಳನ್ನು ನಿರುತ್ಸಾಹಗೊಳ್ಳುವಂತೆ ಮಾಡಬಲ್ಲದು, ಅಥವಾ **ಮನಗುಂದಿಸಬಲ್ಲದು**. ಗ್ರೀಕ್.ನಲ್ಲಿ, "ಮನಗುಂದು" ಎಂಬುದು ಒಂದೇ ಪದವಾಗಿದೆ, ἀθυμέω (*athumeō*), ಅದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಅದು "ಎದೆಗುಂದು, ನಿರಾಶೆಗೊಳ್ಳು, ಅಥವಾ ಖಿನ್ನನಾಗು" ಎಂದು ಸಹ ಅನುವಾದಿಸಲ್ಪಡಬಲ್ಲದು. ಮಗುವಿನ ಮೃದು ಹೃದಯವು ಸುಲಭವಾಗಿ ಮುರಿದು ಹೋಗಬಲ್ಲದು, ಹೀಗೆ ಮಗುವು ತನ್ನ ಬಗ್ಗೆ ಕೀಳರಿಮೆಯನ್ನು ಬೆಳೆಸಿಕೊಳ್ಳುವಂತೆ ಕಾರಣವಾಗಬಲ್ಲದು.

ತಂದೆತಾಯಿಗಳ ಪ್ರಯಾಸವು ಕೇವಲ ತುಂಟರಾಗಿರುವದರಿಂದ ದೂರವಿರುವಂತೆ

ಮಕ್ಕಳನ್ನು ತರಬೇತುಗೊಳಿಸುವದರ ಮೇಲೆಯೇ ಕೇಂದ್ರಿಕೃತವಾಗಿರಬಾರದು. ಯಾವದು ತಪ್ಪೋ ಅದನ್ನು ನಿರ್ಮೂಲನೆ ಮಾಡುವ ಬಗ್ಗೆ ಹೆಚ್ಚಾದ ಒತ್ತು ಕೊಡುವದರಿಂದ ಒಂದು ಮಗುವನ್ನು ನಕಾರಾತ್ಮಕವಾಗಿರುವಂತೆ ಮಾಡಬಲ್ಲದು. ತಂದೆತಾಯಿಗಳ ಸೂಕ್ತವಾದ ಗುರಿಯೆಂದರೆ ತಮ್ಮ ಮಕ್ಕಳನ್ನು ಅವರ ನಡತೆಯಲ್ಲಿ ಕ್ರಿಸ್ತನ ಸಾರೂಪ್ಯವುಳ್ಳವರಾಗಿರುವಂತೆ ತರಬೇತುಗೊಳಿಸುವದೇ ಆಗಿದೆ, ಅದರಲ್ಲಿ ಸಕಾರಾತ್ಮಕವಾದ ಗುಣಗಳನ್ನು ಧರಿಸಿಕೊಂಡು ನಕಾರಾತ್ಮಕವಾದವುಗಳನ್ನು ತೆಗೆದು ಹಾಕುವದು ಸೇರಿರುತ್ತದೆ. ಮಕ್ಕಳಿಗೆ ಅನುಸರಿಸುವದಕ್ಕಾಗಿ ವೀರರ ಮತ್ತು ಆದರ್ಶ ವ್ಯಕ್ತಿಗಳ ಅಗತ್ಯವಿರುತ್ತದೆ, ಹೊರತು ಕೆಟ್ಟ ನಡತೆಗಾಗಿ ನಿರಂತರವಾಗಿ ಖಂಡಿಸುತ್ತಲೇ ಇರುವದಲ್ಲ. "ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ" ಮಗುವನ್ನು ತರಬೇತುಗೊಳಿಸುವದರಲ್ಲಿ (ಜ್ಞಾನೋಕ್ತಿ 22:6) ಆತನು ಹೋಗಬಾರದಾದ ಮಾರ್ಗದ ಬಗ್ಗೆ ತರಬೇತುಗೊಳಿಸುವದಕ್ಕಿಂದತಲೂ ಹೆಚ್ಚಿನದು ಸೇರಿರುತ್ತದೆ. ಬಹುಶಃ ತಪ್ಪು ಮಾರ್ಗದ ಬಗ್ಗೆ ಎಚ್ಚರಿಸುವದಕ್ಕಿಂತಲೂ ಆತನಿಗೆ ಸರಿಯಾದ ಮಾರ್ಗವನ್ನು ತೋರಿಸುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ.

ರೋಮನ್ ಜಗತ್ತಿನಲ್ಲಿ, ಒಂದು ಮಗುವಿನ ಮೇಲೆ ತಂದೆಗೆ ಮರಣ ಹಾಗೂ ಜೀವದ ಹಕ್ಕು ಇತ್ತು. ಎಲ್ಲಾ ಜನರ ಜೀವಿತಗಳಿಗೆ ಗೌರವಾರ್ಥವಾಗಿ, ಯೇಸು ಮಕ್ಕಳನ್ನು ಸಹ ಸೇರಿಸಿ, ಎಲ್ಲಾ ಜನರನ್ನು ಅವರ ಭಾವನೆಗಳಿಗೆ ಮತ್ತು ಹಿತದ ಬಗ್ಗೆ ಪ್ರೀತಿಯಿಂದ ಕೂಡಿದ ಪರಿಗಣನೆಯನ್ನು ನೀಡುವಂಥ ಸ್ಥಾನಕ್ಕೆ ಏರಿಸಿದನು. ಮತ್ತಾಯ 7:12ರ ಮೂಲತತ್ವವು, ಪ್ರಾಯಸ್ಥರು ಮತ್ತು ಮಕ್ಕಳು ಎಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ಬೇರೆಯವರು ತಮ್ಮ ಜೊತೆ ಹೇಗೆ ನಡೆದುಕೊಳ್ಳಬೇಕೆಂದು ತಂದೆತಾಯಿಗಳು ಇಷ್ಟಪಡುತ್ತಾರೋ ಅವರು ತಮ್ಮ ಮಕ್ಕಳ ಜೊತೆಗೂ ಹಾಗೆಯೇ ನಡೆದುಕೊಳ್ಳುವವರಾಗಿರಬೇಕು. ತಂದೆಗಳು ಕೊಲೊಸ್ಸೆ 3:8, 9, 12-14 ವಚನಗಳಲ್ಲಿ ಪೌಲನು ಪಟ್ಟಿ ಮಾಡಿರುವ ದುರ್ಗುಣಗಳನ್ನು ನಿರ್ಮೂಲನ ಮಾಡಿ ಸದ್ಗುಣಗಳನ್ನು ಧರಿಸಿಕೊಳ್ಳುವದಾದರೆ, ಅವರು ತಮ್ಮ ಮಕ್ಕಳ ಜೊತೆಯಲ್ಲಿ ಪ್ರೀತಿಯಿಂದ ಕೂಡಿದ ದಯೆಯಿಂದ ನಡೆದುಕೊಳ್ಳುವರು.

ಪ್ರತಿಯೊಬ್ಬರು ಸಹ ಯಾರೋ ಒಬ್ಬರಿಗೆ ಅಧೀನರಾಗಿರಬೇಕಿರುತ್ತದೆ. ಗಂಡಂದಿರು, ಹೆಂಡತಿಯರು, ಮತ್ತು ಮಕ್ಕಳು ಸೇರಿದಂತೆ, ಎಲ್ಲಾ ಜನರು ಸರ್ಕಾರಕ್ಕೆ, ಅದರ ಅಧಿಕಾರಿಗಳಿಗೆ, ಮತ್ತು ದೇವರಿಗೆ ವಿಧೇಯರಾಗತಕ್ಕದ್ದು. ಮಕ್ಕಳು ಸಹ ತಮ್ಮ ಹೆತ್ತವರಿಗೆ ಅಧೀನರಾಗಬೇಕು. ದಾಸರು ಯಜಮಾನರಿಗೆ, ಹೆತ್ತವರಿಗೆ, ಸರ್ಕಾರಕ್ಕೆ, ಮತ್ತು ದೇವರಿಗೆ ವಿಧೇಯರಾಗತಕ್ಕದ್ದು. ಎಲ್ಲಾ ಸಂಬಂಧಗಳಲ್ಲಿಯೂ ಅಧೀನರಾಗಿರುವದು ಮತ್ತು ವಿಧೇಯರಾಗುವದು ಅಗತ್ಯವಿರುತ್ತದೆ; ಈ ಪ್ರತಿಕ್ರಿಯೆಗಳಿಂದ ಕೀಳರಿಮೆ ಅಥವಾ ಕಡಿಮೆ ಸಾಮರ್ಥ್ಯವುಳ್ಳವರೆಂಬ ಅರ್ಥವನ್ನು ಸೂಚಿಸುವದಿಲ್ಲ.

## ದಾಸರು ಯಜಮಾನರಿಗೆ (3:22-25)

**22 ದಾಸತ್ವದಲ್ಲಿರುವವರೇ, ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು**

**ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಮಾಡಿರಿ. [23]ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ; [24]ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನ ಹೊಂದುವವೆಂದು ತಿಳಿದಿದ್ದೀರಲ್ಲಾ, ನೀವು ಕರ್ತನದ ಕ್ರಿಸ್ತನಿಗೇ ದಾಸರಾಗಿದ್ದೀರಿ. [25]ಅನ್ಯಾಯಮಾಡುವವನು ತಾನು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರತಿಫಲವನ್ನು ಹೊಂದುವನಷ್ಟೆ; ಪಕ್ಷಪಾತವಿರುವದಿಲ್ಲ.**

## "ದಾಸತ್ವದಲ್ಲಿರುವವರೇ, ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ" (3:22)

ಸ್ವತ್ತಿನ ರೀತಿಯಲ್ಲಿ, ದಾಸತ್ವದಲ್ಲಿರುವವರಿಗೆ ಯಾವದೇ ಹಕ್ಕುಗಳಿರಲಿಲ್ಲ. ಅವರು ತಮ್ಮ ಯಜಮಾನರ ಪ್ರತಿಯೊಂದು ಹುಚ್ಚಾಟದ ಗೀಳು ಮತ್ತು ಬೇಡಿಕೆಯ ಅನುಗುಣವಾಗಿ ಅವರ ಸೇವೆಯನ್ನು ಮಾಡಬೇಕಾಗಿತ್ತು. ಕೆಲವು ಯಜಮಾನರು ದರ್ಪಿಷ್ಟರಾಗಿರುತ್ತಿದ್ದರೆ, ಇನ್ನು ಕೆಲವರು ದಾಸರ ಸಂಗಡ ಗೌರವದಿಂದ ವರ್ತಿಸುತ್ತಿದ್ದರು. ಆತನು ತನ್ನ ಯಜಮಾನನಿಂದ ಹೇಗೆ ನಡಿಸಿಕೊಳ್ಳಲ್ಪಟ್ಟರೂ ಸರಿಯೇ, ಕ್ರೈಸ್ತ ದಾಸನು ಸರಿಯಾದದ್ದೆಲ್ಲದರಲ್ಲಿಯೂ ತನ್ನ ಯಜಮಾನನಿಗೆ **ವಿಧೇಯನಾಗಬೇಕು** (ὑπακούω, *hupakouō* ಎಂಬದರಿಂದ ಬಂದದ್ದು) ಬೋಧಿಸಲ್ಪಟ್ಟಿರುತ್ತಾನೆ.

ಹೆಂಡತಿಯರಿಗೆ, ಗಂಡಂದಿರಿಗೆ, ಮಕ್ಕಳಿಗೆ, ತಂದೆಗಳಿಗೆ, ಅಥವಾ ಯಜಮಾನರಿಗೆ ಕೊಟ್ಟದ್ದಕ್ಕಿಂತಲೂ ಹೆಚ್ಚು ವಿಸ್ತಾರವಾದ ಬೋಧನೆಯನ್ನು ಪೌಲನು ದಾಸರಿಗೆ ಕೊಟ್ಟಿರುತ್ತಾನೆ. ಕ್ರೈಸ್ತ ದಾಸರಿಗೆ ಆತನು ಮಾಡಿದ ಪ್ರಮುಖ ಮನವಿಯು ಯೇಸುವಿನೊಂದಿಗಿನ ಒಂದು ಸಂಬಂಧದ ಮೇಲೆ ಆಧಾರವಾಗಿತ್ತು. ದಾಸರಿಗೆ ಬೋಧನೆಯನ್ನು ಕೊಡುವ ವೇಳೆ, ಸಭೆಯ ಜವಾಬ್ದಾರಿಯುತ ಸದಸ್ಯರಾಗಿ ಆತನು ಅವರಿಗೆ ಮರ್ಯಾದೆಯನ್ನು ತೋರಿಸಿದನು. ಅವರಿಗೆ ಅನುಸರಿಸುವಂತೆ ಕೇವಲ ನಿರ್ದೇಶನಗಳನ್ನು ಮಾತ್ರವೇ ಆತನು ಕೊಡಲಿಲ್ಲ, ಆದರೆ ಆತನು ಅವರಿಗೆ ಏಕೆ "ವಿಧೇಯರಾಗಬೇಕು" ಎಂಬದಕ್ಕೆ ಕಾರಣಗಳನ್ನು ಸಹ ಕೊಡುತ್ತಾನೆ. ದಾಸರ ಜವಾಬ್ದಾರಿಗಳ ಬಗ್ಗೆ ಆತನು ಬೇರೆ ಪತ್ರಿಕೆಗಳಲ್ಲಿ ಸಹ ಮಾತಾಡಿರುತ್ತಾನೆ (ನೋಡಿರಿ ಎಫೆಸ 6:5-8; 1 ತಿಮೊಥೆ 6:1, 2). ದಾಸರು ವಕ್ರಬುದ್ಧಿಯುಳ್ಳ ಯಜಮಾನರಿಗೆ ಮತ್ತು ಸಾತ್ವಿಕರಾಗಿರುವ ಯಜಮಾನರಿಗೆ ಇಬ್ಬರಿಗೂ ವಿಧೇಯರಾಗಬೇಕು ಎಂಬದಾಗಿ ಪೇತ್ರನು ಬರೆಯುತ್ತಾನೆ (1 ಪೇತ್ರ 2:18-20).

**ಈ ಲೋಕದಲ್ಲಿನ ಯಜಮಾನರಿಗೆ** (τοῖς κατὰ σάρκα κυρίοις, *tois kata sarka kuriois*) ಎಂಬದರ ಅಕ್ಷರಶಃ ಅರ್ಥವು "ಶರೀರಕ್ಕನುಗುಣವಾದ ಯಜಮಾನರು" ಎಂದಾಗಿರುತ್ತದೆ. ಈ ಪದಗುಚ್ಛವು ಕ್ರೈಸ್ತರ ಪರಲೋಕದ, ಆತ್ಮೀಕ ಕರ್ತನೂ ಒಡೆಯನೂ ಆಗಿರುವ ಯೇಸುವಿಗೆ ವಿರುದ್ಧವಾಗಿರುತ್ತದೆ. "ಯಜಮಾನ" ಎಂಬುದಕ್ಕಾಗಿರುವ ಪದವು ಬಹಳಷ್ಟು ಸಾರಿ "ಕರ್ತನು" ಎಂದು ಅನುವಾದಿಸಲ್ಪಟ್ಟಿರುತ್ತದೆ ಮತ್ತು ಅದು ಬಹಳ ಸತತವಾಗಿ ಯೇಸುವನ್ನು ಸೂಚಿಸಿ ಬಳಸಲ್ಪಟ್ಟಿರುತ್ತದೆ. ಒಬ್ಬ ಕ್ರೈಸ್ತ ಯಜಮಾನನೊಂದಿಗೆ ಕ್ರೈಸ್ತ ದಾಸನೊಬ್ಬನು ಹೊಂದಿರುವ ಸಂಬಂಧ ಭೂಲೋಕದ ಸಂಬಂಧಕ್ಕಿಂತಲೂ ಹೆಚ್ಚಿನದ್ದಾಗಿತ್ತು, ಯಾಕೆಂದರೆ ಆತನು ದಾಸನಷ್ಟೇ ಆಗಿರದೆ ಕ್ರಿಸ್ತನಲ್ಲಿ ಒಬ್ಬ ಸಹೋದರನು ಸಹ ಆಗಿದ್ದನು.

ದಾಸನು **ಎಲ್ಲಾ ವಿಷಯಗಳಲ್ಲಿ** ವಿಧೇಯನಾಗಬೇಕಿತ್ತು. ಈ ಪದಗುಚ್ಛವು ಸೂಚಿತ ವರ್ಗದೊಳಗಿರುವ ಎಲ್ಲಾ ವಿಷಯಗಳಲ್ಲಿ ಎಂಬರ್ಥದಲ್ಲಿ ಬಳಸಲ್ಪಟ್ಟಿದೆ – ಈ ಸನ್ನಿವೇಶದಲ್ಲಿ, ದೇವರ ದೃಷ್ಟಿಯಲ್ಲಿ ನ್ಯಾಯಯುತವಾಗಿರುವ ಎಲ್ಲಾ ವಿಷಯಗಳಲ್ಲಿ ಎಂದಾಗಿರುತ್ತದೆ.

ಮೊದಲ ಶತಮಾನದ ಸಮಾಜದಲ್ಲಿ ಗುಲಾಮತನವು ಅಂಗೀಕರಿಸಲ್ಪಟ್ಟಿತ್ತು. ಪೌಲನು ಗುಲಾಮತನವನ್ನು ಅನುಮೋದಿಸದಿರುವ ಸಾಧ್ಯತೆ ಬಹಳಷ್ಟಿರುತ್ತದೆ; ಆತನು ಕೊರಿಂಥದವರಿಗೆ ಒಬ್ಬ ದಾಸನಿಗೆ ಬಿಡುಗಡೆಯಾಗುವದಕ್ಕೆ ಸಾಧ್ಯವಿದ್ದಲ್ಲಿ ಬಿಡುಗಡೆಯನ್ನು ಅಂಗೀಕರಿಸಿಕೊಳ್ಳಲೇಬೇಕು ಎಂಬದಾಗಿ ಬರೆದನು (1 ಕೊರಿಂಥ 7:21). ಹೇಗೂ, ದಾಸರು ಮತ್ತು ಯಜಮಾನರು ಒಂದು ಸಾಮಾಜಿಕ ಕ್ರಾಂತಿಯಲ್ಲಿ ತೊಡಗಿಸಿಕೊಂಡು ಗುಲಾಮತನವನ್ನು ಅಂತ್ಯಗೊಳಿಸಬೇಕೆಂದು ಆತನು ಆಜ್ಞಾಪಿಸಲಿಲ್ಲ. ಬದಲಾಗಿ, ಅವರ ಸಂಬಂಧಗಳಿಗೆ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡುವಂಥ ಮೂಲತತ್ವಗಳನ್ನು ಮುಂದಿಡುತ್ತಾನೆ. ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ ಇನ್ನು ಮೇಲೆ ಒನೇಸಿಮನನ್ನು ದಾಸನೆಂದು ಕಾಣಬೇಡ, ಆದರೆ ಒಬ್ಬ ಕ್ರೈಸ್ತ ಸಹೋದರನಂತೆ ಕಾಣಬೇಕೆಂದು ಶಿಫಾರಸ್ಸು ಮಾಡುತ್ತಾನೆ (ಫಿಲೆಮೋನ 16).

ದಾಸರ ಕುರಿತಾಗಿ ಯೇಸುವಿನ ಬೋಧನೆಗಳು ಅವರಿಗೆ ಸಭೆಯಲ್ಲಿ ಸಮಾನತೆಯನ್ನು ಒದಗಿಸಿದವು ಮತ್ತು ಕ್ರಮೇಣವಾಗಿ ಲೋಕದ ಬಹುಪಾಲು ಭಾಗಗಳಲ್ಲಿ ದಾಸತ್ವವನ್ನು ಅಂತ್ಯಗೊಳಿಸಿದವು. ಆತನ ಪ್ರೀತಿಯ ಮೂಲತತ್ವವು ತಮ್ಮ ದಾಸರ ಜೊತೆ ಒಳ್ಳೇವರಾಗಿ ನಡೆದುಕೊಳ್ಳುವಂತೆ, ಅವರ ಕಡೆಗೆ ದಯಾದಾಕ್ಷಿಣ್ಯರಹಿತರಾಗಿ ಇರದೆ ಅವರನ್ನು ನೆರೆಯವರಂತೆ ಕಾಣುವ ಹಾಗೆ ಕ್ರೈಸ್ತರನ್ನು ಪ್ರೋತ್ಸಾಹಿಸಿತು (ರೋಮಾ 13:8-10). ಬೇರೆಯವರು ತನ್ನ ಜೊತೆಯಲ್ಲಿ ನಡೆದುಕೊಳ್ಳಬೇಕೆಂದು ಒಬ್ಬನು ಬಯಸುವ ರೀತಿಯಲ್ಲಿಯೇ ತಾನೂ ಅವರ ಜೊತೆಯಲ್ಲಿ ಹಾಗೆಯೇ ನಡೆದುಕೊಳ್ಳಬೇಕೆಂಬ ಯೋಚನೆಯು (ಮತ್ತಾಯ 7:12) ದಾಸತ್ವವನ್ನು ನಿರ್ಮೂಲನ ಮಾಡುವದಕ್ಕೆ ಕೊಡುಗೆಯನ್ನು ನೀಡಿತು.

ಇಂದು ಬಹುಪಾಲು ಸಮಾಜಗಳಲ್ಲಿ ದಾಸತ್ವದ ಕುರಿತು ಚರ್ಚಿಸುವದು ಅನಾವಶ್ಯಕವಾಗಿ ತೋರಬಹುದಾದರೂ, ವಾಸ್ತವಿಕದಲ್ಲಿ ಕ್ರೈಸ್ತನಿಗೆ ದಾಸ – ಯಜಮಾನ ಸಂಬಂಧವು ಅತ್ಯಂಥ ಪ್ರಸಕ್ತ ಚರ್ಚೆಯಾಂಶಗಳಲ್ಲೊಂದಾಗಿರುತ್ತದೆ – ಯಾಕೆಂದರೆ ಅದು ಕ್ರಿಸ್ತನೊಂದಿಗೆ ನಮಗಿರುವ ಸಂಬಂಧಕ್ಕೆ ಒಂದು ಸೂಕ್ತವಾದ ವರ್ಣನೆಯಾಗಿರುತ್ತದೆ (ನೋಡಿರಿ 4:1; 1 ಕೊರಿಂಥ 7:22). ಪೌಲನು ಆಗಾಗ್ಗೆ ತನ್ನನ್ನು ಅಥವಾ ಜೊತೆ ಕ್ರೈಸ್ತನೊಬ್ಬನನ್ನು ಒಬ್ಬ "ದಾಸನು" ಎಂದು ಕರೆಯುತ್ತಾನೆ (ರೋಮಾ 1:1; ಕೊಲೊಸ್ಸೆ 1:7; 4:7). ಕ್ರಿಸ್ತನ ದಾಸರಾಗಿ, ಅಥವಾ ಸೇವಕರಾಗಿ, ದಾಸ – ಯಜಮಾನ ಸಂಬಂಧದ ವಿಷಯದಲ್ಲಿ ಪೌಲನು ನೀಡಿದ ಬೋಧನೆಗಳಿಂದ ನಾವು ಬಹಳಷ್ಟನ್ನು ಕಲಿತುಕೊಳ್ಳಬಹುದಾಗಿದೆ.

## "ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ" (3:22)

**ಬಾಹ್ಯ ಸೇವೆ** (ὀφθαλμοδουλία, *ophthalmodoulia*) ಎಂಬುದು ಗ್ರೀಕ್‌ನಲ್ಲಿ

ಒಂದೇ ಪದವಾಗಿರುತ್ತದೆ. ಅಕ್ಷರಶಃ "ಕಣ್ಣು ಸೇವೆ" ಎಂಬ ಅರ್ಥವನ್ನು ಕೊಡುವ, ಈ ಪದವು ಎಫೆಸ 6:6ರಲ್ಲಿ ಸಹ ಸಿಕ್ಕುತ್ತದೆ. ದಾಸನು ಮಾಲೀಕನನ್ನು ಅಥವಾ ಕೆಲಸ ಮಾಡಿಸುವವನನ್ನು ಮೆಚ್ಚಿಸಬೇಕು ಎಂಬಂತೆ, ಅವರು ಕಣ್ಣೆದುರಿಗಿದ್ದಾಗ ಮಾತ್ರವೇ ನಂಬಿಗಸ್ತರಾಗಿ ಪರಿಶ್ರಮವನ್ನು ಪಡುವವನಾಗಿ ಯಜಮಾನನು ಕಣ್ಣೆದುರಿಗಿಲ್ಲವೆಂದ ತಕ್ಷಣ ತನ್ನ ಕರ್ತವ್ಯಗಳನ್ನು ನಿರ್ಲಕ್ಷಿಸುವವನಾಗಿರಬಾರದು. ಯೇಸುವನ್ನು ಮೆಚ್ಚಿಸಬೇಕೆಂಬುದೆ ಸೇವೆ ಮಾಡುವದಕ್ಕೆ ಸೂಕ್ತವಾದ ಪ್ರೇರಣೆಯಾಗಿರಬೇಕಿತ್ತು. ಆತನು ನೋಡುತ್ತಿರುವನೆಂದು ಮಾಡಿದ ಪ್ರತಿಯೊಂದು ಮಾಡಲ್ಪಡುತ್ತಿತ್ತು, ಮತ್ತು ಆತನು ನಿತ್ಯವಾದ ಪ್ರತಿಫಲವನ್ನು ಕೊಡುವನು. ಒಬ್ಬ ಉತ್ತಮ ದಾಸನು ಮಾಡಿದ ಕಠಿಣ ಪರಿಶ್ರಮದಿಂದ ಸಿಕ್ಕುವ ಪ್ರಯೋಜನಗಳು ಆತನಿಗೊಂದು ಭೂಲೋಕದ ಪ್ರತಿಫಲದ ಲಾಭವನ್ನು ಮಾಡಿ ಕೊಡಬಹುದು, ಆದರೆ ಗಳಿಸಿಕೊಳ್ಳಲಿದ್ದಂಥ ಪರಲೋಕದ ಆಶೀರ್ವಾದಗಳು ಹೆಚ್ಚು ಪ್ರಾಮುಖ್ಯವಾಗಿದ್ದವು. ಕ್ರೈಸ್ತ ದಾಸನು ಮೊದಲು ಕ್ರಿಸ್ತನಿಗೆ ಸೇರಿದವನಾಗಿದ್ದನು (1 ಕೊರಿಂಥ 7:22) ಮತ್ತು ನಂತರವಷ್ಟೆ ಭೂಲೋಕದ ಯಜಮಾನನಿಗೆ ಸೇರಿದ್ದನು.

**ಮನುಷ್ಯರನ್ನು ಮೆಚ್ಚಿಸುವವರು** (ἀνθτρωπάρεσκοι, *anthrōpareskoi*) ಎಂಬುದು ಹೊಸ ಒಡಂಬಡಿಕೆಯೊಳಗೆ ಇನ್ನೊಂದು ಸಾರಿ ಕಾಣಿಸಿಕೊಳ್ಳುವದಾಗಿದ್ದು, ಅಲ್ಲಿ ಅದು "ಮನುಸ್ಯರನ್ನು ಮೆಚ್ಚಿಸುವವರು" ಎಂದು ಅನುವಾದಿಸಲ್ಪಟ್ಟಿರುವ ರೂಪದಲ್ಲಿ ಇರುತ್ತದೆ (ಎಫೆಸ 6:6). ಪೌಲನು ತನ್ನ ಸಾರುವಿಕೆಯ ಬಗ್ಗೆ ಬರೆಯುವ ವೇಳೆ, ಇದೇ ಪದವನ್ನು ಬಳಸದಿದ್ದಾಗ್ಯೂ, ಈ ಯೋಚನೆಯನ್ನು ಸೇರ್ಪಡೆಗೊಳಿಸಿದ್ದನು. ಆತನು ಜನರನ್ನು ಮೆಚ್ಚಿಸಬೇಕೆಂದು ತನ್ನ ಸಂದೇಶವನ್ನು ಮಾರ್ಪಡಿಸಿಕೊಳ್ಳಲಿಲ್ಲ (ಗಲಾತ್ಯ 1:10; 1 ಥೆಸಲೋನಿಕ 2:4), ಆದರೆ ತನ್ನ ಜೀವಿಸುವ ರೀತಿಯ ಮೂಲಕ ಅವರ ಮನಸ್ಸನ್ನು ನೋಯಿಸದಿರುವದಕ್ಕೆ ಪ್ರಯತ್ನಿಸಿದನು (1 ಕೊರಿಂಥ 10:33).

ಒಬ್ಬ ದಾಸನು ಯಜಮಾನನ ಕಣ್ಣೆದುರಿಗೆ ಮಾತ್ರವೇ ಸೇವೆ ಮಾಡಬಾರದಿತ್ತು ಅಥವಾ ವಿಧೇಯನಾಗುವದಕ್ಕೆ ಒತ್ತಾಯಿಸಲ್ಪಟ್ಟವನಾಗಿ ಸೇವೆಯನ್ನು ಮಾಡಬಾರದಿತ್ತು. ಯಜಮಾನ ಅಥವಾ ಬೇರೊಬ್ಬನಾಗಲಿ ನೋಡುತ್ತಿದ್ದರೂ ಸರಿಯೇ ಅಥವಾ ನೋಡುತ್ತಿಲ್ಲವಾದರೂ ಸರಿಯೇ, ಆತನ ಕೆಲಸವು ಹೃದಯಪೂರ್ವಕವಾಗಿ ಬಂದ ಯಥಾರ್ಥವಾದ ಸೇವೆಯಾಗಿರಬೇಕಿತ್ತು.

"ಮಾಡದೆ" (μή, *mē*) ಜೊತೆಯಲ್ಲಿ "ಆದರೆ" (ἀλλά, *alla*) ಎಂಬುದು ಒಂದು ಗ್ರೀಕ್ ನುಡಿಗಟ್ಟು ಆಗಿದ್ದು ಅದು ವಾಕ್ಯರಚನೆಯ ಮೊದಲ ಭಾಗವನ್ನು ಸಂಪೂರ್ಣ ಹೊರಗಿಡುವದಿಲ್ಲ ಆದರೆ ಎರಡನೆಯ ಅರ್ಧಭಾಗಕ್ಕೆ ಒತ್ತು ಕೊಡುತ್ತದೆ. "ಅದನ್ನು Bಯಷ್ಟೆ A ಅಲ್ಲ" ಎಂಬಂತೆ ಅರ್ಥಮಾಡಿಕೊಳ್ಳತಕ್ಕದ್ದು. ದಾಸರು ಯಜಮಾನರನ್ನು ಮೆಚ್ಚಿಸುವದರಿಂದ ದೂರವಿರಬೇಕೆಂದು ಹೇಳುತ್ತಿಲ್ಲ; ಬದಲಾಗಿ, ಯೇಸುವನ್ನು ಮೆಚ್ಚಿಸುವದೇ ಅವರ ಮೊದಲ ಆದ್ಯತೆಯಾಗಿರಬೇಕೆಂದು ಆತನು ಹೇಳುತ್ತಿದ್ದಾನೆ. ಈ ಕಾರಣದಿಂದಲೇ NASBಯ ಪರಿಷ್ಕರಿಸಲ್ಪಟ್ಟ ಆವೃತ್ತಿಯಲ್ಲಿ "ಕೇವಲ ಮನುಷ್ಯರನ್ನೇ ಮೆಚ್ಚಿಸುವವರು ಮಾಡುವ ಪ್ರಕಾರ" ಎಂದಿರುತ್ತದೆ. ಗ್ರೀಕ್ ವಾಕ್ಯದಲ್ಲಿ "ಕೇವಲ" ಎಂಬುದಿಲ್ಲವಾದರೂ, ಅದರ ಅರ್ಥವು ಗ್ರೀಕ್ ನುಡಿಗಟ್ಟಿನಲ್ಲಿ ಸೂಚ್ಯಾರ್ಥವಾಗಿ

ತಿಳಿಸಲ್ಪಟ್ಟಿರುತ್ತದೆ.[5]

ಒಂದು ಆಜ್ಞೆಗೆ ವಿಧೇಯರಾಗಬೇಕು ಅಥವಾ ಮನುಷ್ಯರನ್ನು ಮೆಚ್ಚಿಸಬೇಕು ಎಂಬದಕಷ್ಟೆ ಸೇವೆಯನ್ನು ಮಾಡುವ ಕಾರ್ಯಗಳು ಸಂಪೂರ್ಣವಾಗಿ ದೂರವಿರಬೇಕಾದವುಗಳಲ್ಲ. ಸೇವೆಯು ಮನುಷ್ಯರಿಂದ ನೋಡಲ್ಪಡಬೇಕು ಮತ್ತು ಅವರನ್ನು ಮೆಚ್ಚಿಸಬೇಕು ಎಂಬ ಬಯಕೆಗಿಂತಲೂ ದೇವರ ಭಯದಿಂದ ಉದ್ಭವಿಸುವದಾಗಿರಬೇಕು ಎಂದು ಪೌಲನು ಹೇಳುತ್ತಿದ್ದಾನೆ.

## "ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಕೆಲಸಮಾಡಿರಿ" (3:22)

ದಾಸರು ಯಜಮಾನರಿಗೆ ತೋರಿಸಬೇಕಾದ ಮರ್ಯಾದೆಯು ಕ್ರಿಸ್ತನ ಒಡೆತನವನ್ನು ಮನ್ನಣೆ ಮಾಡುವದರ ಮೇಲೆ ಆಧಾರವಾಗಿರಬೇಕಾಗಿತ್ತು. ದಾಸರಿಗೆ ಇಬ್ಬರು ಬೇರೆ ಬೇರೆ ಯಜಮಾನರಿದ್ದರು, ಭೂಲೋಕದ ಕರ್ತರು (κύριοι, *kurioi*, "ಯಜಮಾನರು") ಮತ್ತು ಪರಲೋಕದ ಕರ್ತನು (κύριος, *kurios*). ಎರಡೂ ಪದಗಳು ಗ್ರೀಕ್ ನ ಒಂದೇ ಪದದಿಂದ ಬಂದವುಗಳಾಗಿವೆ, ಆದರೆ ಒಂದು ಬಹುವಚನ ಮತ್ತು ಇನ್ನೊಂದು ಏಕವಚನ ರೂಪದ ಪದವಾಗಿದೆ. ಕರ್ತನನ್ನು ಮೆಚ್ಚಿಸುವದಕ್ಕಾಗಿ – ಅಂದರೆ, ದೇವರನ್ನು) – ದಾಸರು ಹೃದಯಪೂರ್ವಕವಾಗಿ ಪ್ರಾಮಾಣಿಕವಾದ ಸೇವೆಯನ್ನು ಮಾಡಬೇಕಿತ್ತು. ಮನುಷ್ಯನ ಹೃದಯವು ವ್ಯಕ್ತಿಯ ಆಂತರ್ಯದ ಕೇಂದ್ರಭಾಗವಾಗಿರುತ್ತದೆ, ಅದರಲ್ಲಿ ಆಲೋಚನೆ, ಭಾವ, ಮತ್ತು ಚಿತ್ತಗಳು ಸೇರಿರುತ್ತವೆ. **ಸರಳ** (ἁπλότης, *haplotēs*) ಎಂಬುದು ಬೇರೊಂದು ಕಡೆಯಲ್ಲಿ ಇದೇ ಅರ್ಥದಲ್ಲಿ ಕಾಣಿಸಿಕೊಳ್ಳುತ್ತದೆ (2 ಕೊರಿಂಥ 1:12; ಎಫೆಸ 6:5). ಈ ಗ್ರೀಕ್ ಪದವು 2 ಕೊರಿಂಥ 11:3ರಲ್ಲಿ "ಸರಳತೆ" ಎಂಬದಾಗಿ, ಮತ್ತು ಬೇರೆ ವಾಕ್ಯಭಾಗಗಳಲ್ಲಿ ಅದು "ಉದಾರತೆ" ಎಂಬರ್ಥವನ್ನು ಕೊಡುತ್ತದೆ (ರೋಮಾ 12:8; 2 ಕೊರಿಂಥ 8:2; 9:11, 13).

ಗ್ರೀಕ್ ಅಥವಾ ರೋಮನ್ ದಾಸನು ಉದ್ದೇಶದಲ್ಲಿ ಏಕತೆಯುಳ್ಳವನಾಗಿ ಅಖಂಡವಾದ ನಿಷ್ಠೆಯನ್ನು ತೋರಿಸಬೇಕಾಗಿತ್ತು. ಆತನು ತನ್ನ ಯಜಮಾನನ ಸ್ವತ್ತಾಗಿದ್ದನು. ಒಂದು ತಾನು ಒಬ್ಬ ದಾಸನನ್ನು ಆಸ್ತಿಯಾಗಿ ಹೊಂದಿದ್ದರೆ ಆತನಿಂದ ಪಡೆಯಲು ಅಪೇಕ್ಷಿಸುತ್ತಿದ್ದ ಅದೇ ಸೇವೆಯನ್ನು ಆತನು ತನ್ನ ಯಜಮಾನನಿಗೆ ಮಾಡಬೇಕಿತ್ತು.

**ಭಯಪಡುವವರಾಗಿ**, φοβούμενοι (*phoboumenoi*) ಎಂಬ ಗ್ರೀಕ್ ಪದವು, ದೇವರನ್ನು ಸೂಚಿಸಿ ಬಳಸಲ್ಪಟ್ಟಾಗ, ಅದು "ಗೌರವಪೂರ್ವಕ ಭಯಭಕ್ತಿ" ಎಂದು ಅರ್ಥನಿರೂಪಿಸಲ್ಪಡಬೇಕು, ಹೊರತು ಅಂಜಿಕೆ ಅಥವಾ ಭಯ ಎಂದಲ್ಲ. ದಾಸರು ತಮ್ಮ ಯಜಮಾನರಿಗೆ ಸೇವೆ ಮಾಡುವಂತೆ ಮತ್ತು ಹೆಂಡತಿಯರು ಭಯಭರಿತರಾಗಿಯೂ (ಅಥವಾ "ಗೌರವದಿಂದ") ದೇವರ ಸೇವೆಯನ್ನು ಮಾಡಬೇಕೆಂದು ಬೋಧನೆ ನೀಡುವ ವೇಳೆ ಪೇತ್ರನು ಈ ಪದದ ರೂಪವನ್ನು ಬಳಸುತ್ತಾನೆ (ನೋಡಿರಿ 1 ಪೇತ್ರ 2:18; 3:2). ಭೂಲೋಕದ ಯಜಮಾನನಿಗೆ ಗೌರವವನ್ನು ಸಲ್ಲಿಸತಕ್ಕದ್ದು. ಅದಕ್ಕಿಂತ ಅಧಿಕವಾಗಿ, ಕರ್ತನಿಗೆ ಗೌರವವನ್ನು ನೀಡತಕ್ಕದ್ದು, ಯಾಕೆಂದರೆ ಆತನೇ ಅಂತಿಮ ಮತ್ತು ದೊಡ್ಡ ಪ್ರತಿಫಲವನ್ನು ಕೊಡುವಾತನಾಗಿದ್ದಾನೆ.

> ಆದರೆ ಕ್ರೈಸ್ತ ದಾಸನು . . . ತನ್ನ ಕರ್ತವ್ಯವನ್ನು ನಂಬಿಗಸ್ತಿಕೆಯಿಂದ ಮತ್ತು ನಿರಂತರವಾಗಿ ನಿರ್ವಹಿಸುವದಕ್ಕೆ ಎಲ್ಲಾ ಉದ್ದೇಶಗಳಲ್ಲಿಯೂ ಅತ್ಯಂತ ಉನ್ನತವಾಗಿದ್ದ ಉದ್ದೇಶವನ್ನು ಹೊಂದಿ [ದ್ದನು]; ಆತನು ಬೇರೆ ಎಲ್ಲವುಗಳಿಗಿಂತಲೂ ಮೀಗಿಲಾಗಿ ಕ್ರಿಸ್ತನ ಒಬ್ಬ ಸೇವಕನಾಗಿ [ದ್ದನು], ಮತ್ತು ಆತನು ಮೊದಲು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆತನನ್ನೇ ಮೆಚ್ಚಿಸಬೇಕೆಂದು ಕೆಲಸ ಮಾಡು [ವನು]. ಭೂಲೋಕದ ಯಜಮಾನನ ಭಯದಿಂದಲ್ಲ ಆದರೆ "ಕರ್ತನಾದ ಕ್ರಿಸ್ತನ" ಕಡೆಗಿರುವ ಭಯಭಕ್ತಿಯೇ, ಪ್ರಾಥಮಿಕ ಉದ್ದೇಶವಾಗಿರಬೇಕು. ಇದು ಕ್ರೈಸ್ತ ಸೇವಕರನ್ನು ತಮ್ಮ ಯಜಮಾನನು ಕಠೋರವಾಗಿ, ಮನಸ್ಸಾಕ್ಷಿಯಿಲ್ಲದವನಾಗಿ ಮತ್ತು ಕೃತಜ್ಞತೆಯಿಲ್ಲದವನಾಗಿ ಇದ್ದಾಗ್ಯೂ ಅತ್ಯಾಸಕ್ತಿಯಿಂದ ಮತ್ತು ಉತ್ಸಾಹಭರಿತರಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವದಾಗಿತ್ತು; ಯಾಕೆಂದರೆ ಅವರು ತಮಗೆ ಕೃತಜ್ಞತೆಗಳು ಆತನಿಂದ ಸಿಕ್ಕಬೇಕೆಂದಲ್ಲ, ಆದರೆ ಕ್ರಿಸ್ತನಿಂದ ಬರಬೇಕೆಂದು ನಿರೀಕ್ಷಿಸುವವರಾಗಿದ್ದರು.[6]

ಯಾವ ಸಂದರ್ಭದಲ್ಲಿಯೂ ದೇವರಿಗೆ "ಭಯಪಡುವವರಾಗಿ" ಸೇವೆ ಮಾಡಬೇಕೆಂಬ ಯೋಚನೆಯು ಪ್ರೀತಿ ಭಯವನ್ನು ಹೊರಡಿಸಿ ಬಿಡುತ್ತದೆ ಎಂಬ ಉಪದೇಶಕ್ಕೆ ವಿರುದ್ಧವಾಗುವದಿಲ್ಲ. "ಪ್ರೀತಿ"ಯು ಭಯವನ್ನು ತೆಗೆದು ಹಾಕುತ್ತದೆ ಎಂದು ಯೋಹಾನನು ಹೇಳಲಿಲ್ಲ, ಆದರೆ "ಪರಿಪೂರ್ಣ ಪ್ರೀತಿಯು" ಹೆದರಿಕೆಯನ್ನು ಹೊರಡಿಸಿಬಿಡುತ್ತದೆ ಎಂದು ಹೇಳಿದನು (1 ಯೋಹಾನ 4:18). ಯಾವನಲ್ಲಿ "ಪರಿಪೂರ್ಣ ಪ್ರೀತಿ" ಇದೆಯೋ ಆತನು ಪರಿಪೂರ್ಣ ವಿಧೇಯತೆಯನ್ನು ಸಹ ಹೊಂದಿರುವನು, ಯಾಕೆಂದರೆ ಪ್ರೀತಿಯು ವಿಧೇಯರಾಗುವಂತೆ ಉತ್ತೇಜಕವನ್ನು ನೀಡುವ ಪ್ರೇರಕಶಕ್ತಿಯಾಗಿರುತ್ತದೆ (ಯೋಹಾನ 14:15, 21, 23; 1 ಯೋಹಾನ 5:3). "[ದೇವರ] ವಾಕ್ಯವನ್ನು ಕೈಕೊಂಡು" ನಡೆಯುವ ವ್ಯಕ್ತಿಯಲ್ಲಿ ಪ್ರೀತಿಯು "ನಿಜವಾಗಿ . . . ಪರಿಪೂರ್ಣವಾಗಿದೆ" (1 ಯೋಹಾನ 2:5). ನಾವು ಕೆಲವು ಸಮಯಗಳಲ್ಲಿ ಪಾಪ ಮಾಡುತ್ತೇವೆ (1 ಯೋಹಾನ 1:8, 10); ಆದುದರಿಂದ, ನಮ್ಮಲ್ಲಿ ಪರಿಪೂರ್ಣ ಪ್ರೀತಿಯು ಇರುವದಿಲ್ಲ. ಈ ಕಾರಣದಿಂದಲೇ ನಮ್ಮಲ್ಲಿ ಭಯವಿರುತ್ತದೆ. ನ್ಯಾಯಯುತವಾದ ಭಯವು ಪಾಪ ಮಾಡದಂತೆ ಮತ್ತು ದೇವರಿಗೆ ಅವಿಧೇಯರಾಗುವದರಿಂದ ಕ್ರೈಸ್ತರನ್ನು ದೂರವಿಸುವದಾಗಿದೆ (ಇಬ್ರಿಯ 10:27, 31).

## "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ" (3:23)

ದಾಸನು ದೇವರಿಗೋಸ್ಕರ ಕೆಲಸ ಮಾಡುತ್ತಿದ್ದಾನೋ ಎಂಬಂದೆ **ಕೆಲಸವನ್ನು ಮಾಡ**ಬೇಕಿತ್ತು. (ἐκ ψυχῆς, *ek psuchēs*, ಅಕ್ಷರಶಃ, "ಆತ್ಮದಿಂದ" ಎಂಬದರ್ಥ) ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯೊಳಗೆ ಇಲ್ಲಿ ಮಾತ್ರವೇ ಕಂಡು ಬರುತ್ತದೆ. ದಾಸರು ದೇವರಿಗಾಗಿ ಹೊಂದಿರುವ ಗೌರವ ಮತ್ತು ಸೇವೆ ಮಾಡಬೇಕೆಂಬ ಆಂತರ್ಯದ ಬಯಕೆಯ ಕಾರಣದಿಂದಾಗಿ ತಮ್ಮ ಯಜಮಾನರಿಗೆ ನಂಬಿಗಸ್ತರಾಗಿ ಸೇವೆಯನ್ನು ಮಾಡಬೇಕಿತ್ತು. ಇದು ಅವರ ವೈಯಕ್ತಿಕವಾದ ಕೀರ್ತಿಗಳನ್ನು ಹೆಚ್ಚಿಸುವದು ಮಾತ್ರವೇ ಆಗಿರದೆ, ಅದು ಯೇಸುವಿನ ಹೆಸರನ್ನು ಮಹಿಮೆ ಪಡಿಸುವದು ಮತ್ತು ಕ್ರೈಸ್ತತ್ವಕ್ಕೆ ಗೌರವವನ್ನು ಸಹ ತರುವಂಥದ್ದಾಗಿತ್ತು. ದೇವರನ್ನು ಮೆಚ್ಚಿಸಬೇಕೆಂದು ಕೆಲಸ ಮಾಡಿದವರು, ತಮ್ಮ

ಯಜಮಾನರನ್ನು ಸಹ ಮೆಚ್ಚಿಸುತ್ತಿದ್ದ ಸಾಧ್ಯತೆಯು ಅಧಿಕವಾಗಿಯೇ ಇರುತ್ತಿತ್ತು. ಸಮರ್ಪಣೆಯಿಂದ ಕೆಲಸವನ್ನು ಮಾಡಿದ ಬಳಿಕವೂ, ಒಬ್ಬನು ತನ್ನ ಭೂಲೋಕದ ಯಜಮಾನನಿಂದ ನಿಂದೆಗಳನ್ನು ಅನುಭವಿಸಿದಾಗ್ಯೂ, ಪರಲೋಕದ ಯಜಮಾನನು ಸಂತೋಷ ಪಡುವನು ಮತ್ತು ಆ ನಂಬಿಗಸ್ತ ದಾಸನಿಗೆ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ನೀಡುವನು (1 ಪೇತ್ರ 1:3, 4).

ಒಬ್ಬ ದಾಸನು ತನ್ನ ಯಜಮಾನನಿಗೆ ವಿಧೇಯನಾಗಬೇಕಿತ್ತಾದರೂ, ಆತನು ತನ್ನ ಭೂಲೋಕದ ಯಜಮಾನನನ್ನು ಮೆಚ್ಚಿಸುವದಕ್ಕಿಂತಲೂ ಯೇಸುವನ್ನೇ ಮೆಚ್ಚಿಸುವದಕ್ಕೆ ಪ್ರಯಾಸವನ್ನು ಪಡಬೇಕಾಗಿತ್ತು. ಒಬ್ಬ ಕ್ರೈಸ್ತನಾದ ಬಳಿಕ, ಒಬ್ಬ ದಾಸನು ಒಂದು ಹೊಸ ಹಾಗೂ ವ್ಯತ್ಯಾಸವಾದ ದೃಷ್ಟಿಕೋನದೊಂದಿಗೆ ಸೇವೆ ಮಾಡಬೇಕಿತ್ತು. ಅದು ಸಾಧ್ಯವಾದರೆ ಬಿಡುಗಡೆಯನ್ನು ಹೊಂದಿಕೊಳ್ಳುವದು ಆಗಿರಬೇಕಿತ್ತು; ಇಲ್ಲವಾದಲ್ಲಿ, ತಾನು ಯಾವ ಸಾಮಾಜಿಕ ಸ್ಥಾನದಲ್ಲಿರುವದಕ್ಕೆ ಕರೆಯಲ್ಪಟ್ಟಿದ್ದಾನೋ ಅದನ್ನು ಆತನು ಅಂಗೀಕರಿಸಿಕೊಳ್ಳಬೇಕಾಗಿತ್ತು (1 ಕೊರಿಂಥ 7:20, 21). ಒಬ್ಬನು ದಾಸನಾಗಿರುವಷ್ಟು ಕಾಲ, ಆತನು ದೇವರಿಗೋಸ್ಕರವೋ ಎಂಬಂತೆ, ತನ್ನ ಯಜಮಾನನಿಗಾಗಿ ಮನಃಪೂರ್ವಕವಾಗಿ ಕೆಲಸ ಮಾಡಬೇಕಾಗಿತ್ತು. ಆತನು ಅತ್ಯುತ್ತಮ ಸೇವೆಯನ್ನು ಮತ್ತು ತನ್ನ ಸಾಮರ್ಥ್ಯಗಳಿಗೆ ತಕ್ಕಂತೆ ಸೇವೆಯನ್ನು ಮಾಡಲು ಅಪೇಕ್ಷಿಸಬೇಕಾಗಿತ್ತು. ದೇವರಿಗೋಸ್ಕರ ಸೇವೆ ಮಾಡುತ್ತಿದ್ದಾನೋ, ಎಂಬಂತೆ ಸೇವೆ ಮಾಡುವದರಿಂದ, ಅದು ಆತನನ್ನು ಉತ್ತಮವಾಗಿ ಸೇವೆ ಮಾಡದಂಥ ದಾಸರೊಳಗಿಂದ ಪ್ರತ್ಯೇಕವಾದವನನ್ನಾಗಿಸುತ್ತಿತ್ತು. ಹೀಗೆ ಮಾಡುವದು ಆತನಿಗೆ ಯಜಮಾನನ ದಯೆಯುಳ್ಳ ಮನ್ನಣೆಯನ್ನು ಮತ್ತು ಸಮುದಾಯ ಗೌರವವನ್ನು ಗಳಿಸಿ ಕೊಡುವದಾಗಿತ್ತು, ಮಾತ್ರವಲ್ಲದೆ ಆತನನ್ನು ಬೇರೆಯವರಿಗೆ ಮಾದರಿಯನ್ನಾಗಿ ಮಾಡುತ್ತಿತ್ತು.

ಕ್ರೈಸ್ತೇತರ ದಾಸರು ತಮ್ಮ ಯಜಮಾನರನ್ನು ಮೆಚ್ಚಿಸುವದಕ್ಕೆ ಕೆಲಸ ಮಾಡಿರಬಹುದಿತ್ತು, ಆದರೆ ಅವರು ಯೇಸುವನ್ನು ಮೆಚ್ಚಿಸಬೇಕೆಂದು ಕೆಲಸ ಮಾಡಿದವರಾಗಿರಲಿಲ್ಲ. ಯೇಸುವನ್ನು ಮೆಚ್ಚಿಸಬೇಕೆಂದು ಕೆಲಸ ಮಾಡುವ ಒಬ್ಬ ಕ್ರೈಸ್ತನು, ಆ ಮೂಲಕ ತನ್ನ ಯಜಮಾನನ್ನು ಸಹ ಮೆಚ್ಚಿಸುವವನಾಗಿರುತ್ತಿದ್ದನು. ಒಬ್ಬ ಕ್ರೈಸ್ತ ಯಜಮಾನನಿಗಾಗಿ ಕೆಲಸ ಮಾಡಿದರೂ ಸರಿಯೇ ಅಥವಾ ಕ್ರೈಸ್ತೇತರ ಯಜಮಾನನಿಗೆ ಕೆಲಸ ಮಾಡಿದರೂ ಸರಿಯೇ ಸೇವೆಯಲ್ಲಿನ ಹುರುಪು ಒಂದೇ ಆಗಿರತಕ್ಕದ್ದು.

## "ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ" (3:24)

ದಾಸನು ದೇವರಿಗೋಸ್ಕರ ಸೇವೆ ಮಾಡುತ್ತಿದ್ದಾನೋ ಎಂಬಂತೆ ದುಡಿಯಬೇಕಾಗಿದ್ದದಕ್ಕೆ ಕಾರಣವೆಂದರೆ ಆತನ ಭೂಲೋಕದ ಯಜಮಾನನು ಕೊಡುವದಕ್ಕೆ ಶಕ್ತನಾಗುವ ಯಾವದೇ ಭೂಲೋಕದ ಪ್ರತಿಫಲಕ್ಕಿಂತಲೂ ಪರಲೋಕದ **ಪ್ರತಿಫಲ** ದೊಡ್ಡದಾಗಿರಲಿತ್ತು. ನಂಬಿಗಸ್ತನಾದ ಕ್ರೈಸ್ತ ದಾಸನು **ಕರ್ತನಿಂದ** ವಾಗ್ದಾನ ಮಾಡಲ್ಪಟ್ಟಿರುವ **ಬಾಧ್ಯತೆಯನ್ನು** ಪಡೆದುಕೊಳ್ಳುವೆನೆಂಬ ಭರವಸೆಯನ್ನು ಹೊಂದಿದವನಾಗಿದ್ದನು.

ಈ "ಬಾಧ್ಯತೆ" (κληρονομία, *klēronomia*) ಯು ಒಂದು ಸಂಪಾದಿಸಿಕೊಳ್ಳಲಾದ

ಸಂಬಳವಾಗಿರಲಿಲ್ಲ ಆದರೆ ಬಾಧ್ಯತೆಯಾಗಿ ಬಂದ ಪ್ರತಿಫಲವಾಗಿತ್ತು. ಕೆಲವು ಪ್ರತಿಫಲಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಸಾಧ್ಯವಿದೆಯಾದರೂ, ಕೊಡಲ್ಪಡುವ ಬೇರೆ ಪ್ರತಿಫಲಗಳು ಕೊಡುವಾತನ ಔದಾರ್ಯತೆಯ ಮೇಲೆ ಆಧಾರವಾಗಿರುತ್ತವೆ. ಬಹಳಷ್ಟು ದಾಸರಿಗೆ ಭೂಲೋಕದ ಬಾಧ್ಯತೆಯೊಂದನ್ನು ಪಡೆಯುವ ನಿರೀಕ್ಷೆಯು ಇರಲಿಲ್ಲ, ಯಾಕೆಂದರೆ ಬಾಧ್ಯತೆಗಳು ಸಾಮಾನ್ಯವಾಗಿ ಸ್ವತಂತ್ರರಿಗೆ ಮೀಸಲಾಗಿದ್ದವು; ಆದರೆ ನಂಬಿಗಸ್ತ ಕ್ರೈಸ್ತ ದಾಸರಿಗೆ ಪರಲೋಕದ ಬಾಧ್ಯತೆಯನ್ನು ಪಡೆದುಕೊಳ್ಳುವ ನಿರೀಕ್ಷೆಯನ್ನು ಹೊಂದಿದ್ದರು. ಕ್ರಿಸ್ತನಲ್ಲಿ ದೊರಕುವ ಸಮಾನತೆಯ ಕಾರಣದಿಂದಾಗಿ, ದಾಸರು ಬೇರೆ ಕ್ರೈಸ್ತರಂತೆಯೇ ಒಂದೇ ಬಾಧ್ಯತೆಯನ್ನು ಪಡೆದುಕೊಳ್ಳುವದನ್ನು ಎದುರು ನೋಡಬಬಹುದಿತ್ತು. ಅವರು "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ" ಪಾಲುಗಾರರಾಗುವರು (ಕೊಲೊಸ್ಸೆ 1:12).

ಯೇಸುವು ಒಂದು ಸಾಮ್ಯವನ್ನು ಹೇಳಿದನು, ಅದರಲ್ಲಿ ದ್ರಾಕ್ಷಾತೋಟದ ಒಕ್ಕಲಿಗರು ಮಗನ ಬಾಧ್ಯತೆಯನ್ನು ತಮ್ಮದಾಗಿಸಿಕೊಳ್ಳುವದಕ್ಕಾಗಿ ಯಜಮಾನನ ಮಗನನ್ನು ಕೊಲ್ಲುತ್ತಾರೆ (ಮತ್ತಾಯ 21:33–40; ಮಾರ್ಕ 12:1–11). ಕ್ರೈಸ್ತ ಬಾಧ್ಯತೆಯನ್ನು ಈ ವಿಧದಲ್ಲಿ ಪಡೆದುಕೊಳ್ಳಲಾಗುವದಿಲ್ಲ. ಅದನ್ನು ಸಂಪಾದಿಸಿಕೊಳ್ಳುವದಕ್ಕೂ ಆಗದು. ರಕ್ಷಣೆಯ ರೀತಿಯಲ್ಲಿಯೇ, ಪರಲೋಕದಲ್ಲಿನ ನಿತ್ಯಜೀವವು ಸಹ ಒಂದು ವರವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 20:32; ಎಫೆಸ 2:8, 9). ಅಷ್ಟುಮಾತ್ರವಲ್ಲದೆ, ಅದು ದೇವರ ಮಕ್ಕಳಾಗಿ (ರೋಮಾ 8:17; ಗಲಾತ್ಯ 4:7) ಹೊಸದಾಗಿ ಹುಟ್ಟಿರುವವರಿಗೆ (ಯೋಹಾನ 3:3–5; 1 ಪೇತ್ರ 1:3, 4) ಒಂದು ನಿತ್ಯವಾದ ಮತ್ತು ಎಂದಿಗೂ ಮುಗಿಯದ ಬಾಧ್ಯತೆಯಾಗಿರುತ್ತದೆ (ಇಬ್ರಿಯ 9:15). ಒಬ್ಬ ವ್ಯಕ್ತಿಯು ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ದೇವರ ಮಗುವಾಗುತ್ತಾನೆ, ಅದು ಪ್ರತಿಯಾಗಿ ಆತನನ್ನು ವಾಗ್ದಾನಕ್ಕನುಗುಣವಾದ ಬಾಧ್ಯಸ್ಥನನ್ನಾಗಿ ಮಾಡುತ್ತದೆ (ಗಲಾತ್ಯ 3:26, 27, 29).

ಸಾಮಾನ್ಯವಾಗಿ ಬಾಧ್ಯತೆಗಳು ಯಜಮಾನನ ಮಕ್ಕಳಿಗೆ ಮೀಸಲಾಗಿರುತ್ತದೆ. ಇದು ಸಹಜವಾದದ್ದಾಗಿದ್ದಾಗ್ಯೂ, ಒಬ್ಬ ಯಜಮಾನನು ತನ್ನ ದಾಸನಿಗೆ ಬಾಧ್ಯತೆಯೊಂದನ್ನು ಕೊಡುವದಕ್ಕೆ ಸಾಧ್ಯವಿತ್ತು. ಒಂದು ಭೂಲೋಕದ ಬಾಧ್ಯತೆಯ ವಾಗ್ದಾನವು ದಾಸನಿಗೆ ಹೆಚ್ಚು ಶ್ರಮಶೀಲತೆಯಿಂದ ದುಡಿಯುವದಕ್ಕೆ ಒಂದು ಉತ್ತೇಜಕವಾಗಿರುತ್ತಿತ್ತು. ಕ್ರೈಸ್ತ ದಾಸನಿಗೆ ಅದಕ್ಕಿಂತ ದೊಡ್ಡ ಉತ್ತೇಜಕವೊಂದಿತ್ತು, ಯಾಕೆಂದರೆ ಆತನಿಗೆ ಯಾವದೇ ಭೂಲೋಕದ ಯಜಮಾನನು ಕೊಡಬಹುದಾಗಿದ್ದ ಬಹುಮಾನಕ್ಕಿಂತ ಎಷ್ಟೋ ಹೆಚ್ಚಾದ ಮೌಲ್ಯವುಳ್ಳ ಬಾಧ್ಯತೆಯನ್ನು ಪಡೆದುಕೊಳ್ಳುತ್ತೇನೆಂಬ ನಿರೀಕ್ಷೆಯು ಇತ್ತು. ದೇವರ ಒಬ್ಬ ಮಗನಾಗಿ, ದಾಸನು ಕ್ರಿಸ್ತನಲ್ಲಿ ಸ್ವತಂತ್ರನಾಗಿದ್ದನು (1 ಕೊರಿಂಥ 7:22), ಯಾಕೆಂದರೆ ಕ್ರಿಸ್ತನಲ್ಲಿ ದಾಸನು ಮತ್ತು ಯಜಮಾನನ ನಡುವಿನ ಭೇದವು ಕಣ್ಮರೆಯಾಗಿತ್ತು. ಕ್ರೈಸ್ತ ದಾಸನು ದೇವರ ಬಾಧ್ಯಸ್ಥನಾಗಿ (ಗಲಾತ್ಯ 3:26–29; 4:7) ಒಂದು ಪರಲೋಕದ ಬಾಧ್ಯತೆಯ ನಿರೀಕ್ಷೆಯನ್ನು, ದೇವರ ಸಂಗಡ ನಿತ್ಯವಾಗಿ ಜೀವಿಸುವ ಅವಕಾಶವನ್ನು ಹೊಂದಿದ್ದನು. ಪರಲೋಕವು ಪ್ರತಿಯೊಬ್ಬ ಕ್ರೈಸ್ತನಿಗಿರುವ ಒಂದೇ ನಿರೀಕ್ಷೆಯಾಗಿರುತ್ತದೆ (ಕೊಲೊಸ್ಸೆ 1:5; ಎಫೆಸ 4:4; 1 ಪೇತ್ರ 1:3, 4).

ತಂದೆಯಿಂದ ಸಿಕ್ಕುವ ಬಾಧ್ಯತೆಯು ಭೂಮಿಯ ಮೇಲಿರುವಂಥ ಒಂದು ಸ್ಥಳವಲ್ಲ.

ಭೌತಿಕ ಆಕಾಶಗಳು ಮತ್ತು ಭೂಮಿಯು ಅಳಿದು ಹೋಗುವವು ಎಂಬದಾಗಿ ಯೇಸು ಕಲಿಸಿದನು (ಮತ್ತಾಯ 24:35). ಅವುಗಳು ಸುಟ್ಟು ಹೋಗುವವೆಂದು ಪೇತ್ರನು ಬರೆದನು (2 ಪೇತ್ರ 3:10), ಮತ್ತು ನ್ಯಾಯತೀರ್ಪಿನ ದೃಶ್ಯದಲ್ಲಿ ಆಕಾಶಗಳು ಮತ್ತು ಭೂಮಿಯು ಅಳಿದು ಹೋದವೆಂದು ಯೋಹಾನನು ಬರೆದನು (ಪ್ರಕಟನೆ 20:11; 21:1).

ಒಂದು ಬಾಧ್ಯತೆಯನ್ನು ಒಂದು ಪ್ರತಿಫಲವಾಗಿ ಕೊಡಲ್ಪಡುತ್ತದೆ ಹೊರತು ಸಂಪಾದಿಸಿಕೊಳ್ಳಲ್ಪಟ್ಟದ್ದಾಗಿ ಅಲ್ಲ. ಈ ಕಾರಣಕ್ಕಾಗಿ, ರಕ್ಷಣೆ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಪ್ರತಿಫಲ ಸಿಕ್ಕುತ್ತದೆ. ವೈಯಕ್ತಿಕ ಸಾಧನೆಗಳ ಆಧಾರದಲ್ಲಿ ಪರಲೋಕವನ್ನು ಸಂಪಾದಿಸಿಕೊಳ್ಳಬಹುದಾಗಿದ್ದರೆ ಅಥವಾ ಅದಕ್ಕೆ ಅರ್ಹತೆಯನ್ನು ಪಡೆಯಬಹುದಾಗಿದ್ದರೆ, ಅದಂತೂ ಹಾಗಿರುವದಿಲ್ಲವಷ್ಟೆ (ಎಫೆಸ 2:8, 9), ಆಗ ಪ್ರತಿಫಲಗಳಲ್ಲಿ ಹೆಚ್ಚು ಮತ್ತು ಕಡಿಮೆಯೆಂಬ ಹಂತಗಳಿರುತ್ತಿದ್ದವು. ಒಬ್ಬ ವ್ಯಕ್ತಿಯು ಯೇಸುವಿಗೋಸ್ಕರ ತನಗೆ ಸಾಧ್ಯವಾದದ್ದನ್ನೆಲ್ಲಾ ಮಾಡಿ ಮುಗಿಸಿದ ಬಳಿಕ, ಆಗಲೂ ಆತನು ಅಯೋಗ್ಯನು ಮತ್ತು ಪ್ರಯೋಜನವಿಲ್ಲದವನು ಆಗಿರುತ್ತಾನೆ (ಲೂಕ 17:7-10). ಯೇಸುವಿನ ಯೋಗ್ಯತೆಯ ಮೂಲಕವಷ್ಟೇ ಯಾವನಾದರೂ ರಕ್ಷಿಸಲ್ಪಡುವದಕ್ಕೆ ಸಾಧ್ಯವಿರುತ್ತದೆ. ತಮ್ಮ ಜೀವಿತಕಾಲವೆಲ್ಲಾ ದುಡಿಯುವವರು ಮತ್ತು ಕಡೇ ಗಳಿಗೆಗಳಲ್ಲಿ ದುಡಿಯುವವರು ಒಂದೇ ಪ್ರತಿಫಲವನ್ನು ಹೊಂದುವರು (ಮತ್ತಾಯ 20:1-16). ಪರಲೋಕದಲ್ಲಿ ಪ್ರತಿಯೊಬ್ಬರಿಗೂ ಒಂದೇ ಸ್ಥಾನಮಾನ ಮತ್ತು ಸಮಾನತೆ ಇರುತ್ತದೆ.

### "ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ" (3:24)

ಪೌಲನು ಹೀಗೆ ಬರೆಯುತ್ತಾನೆ, **ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ**, ಆತನು ಇಲ್ಲಿ (δουλεύετε, *douleuete*) ಎಂಬ ಒಂದು ಬಹುವಚನದ ಕ್ರಿಯಾಪದವನ್ನು ಬಳಸುತ್ತಾನೆ. ಆತನು ದಾಸರನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೆ. ದಾಸರು ಜಾಗರೂಕತೆಯಿಂದ ಸೇವೆ ಮಾಡುವದಕ್ಕೆ ಕಾರಣವು ಭೂಲೋಕದ ಯಜಮಾನರನ್ನು, ಅಥವಾ "ಕರ್ತರನ್ನು" ಮೆಚ್ಚಿಸಬೇಕೆಂದು ಅಲ್ಲ, ಆದರೆ ಅವರಿಗಿಂತ ಎಷ್ಟೋ ದೊಡ್ಡ ಕರ್ತನಾಗಿರುವಂಥ, ಕರ್ತನಾದ ಕ್ರಿಸ್ತನನ್ನು ಮೆಚ್ಚಿಸಬೇಕೆಂದು ಆಗಿತ್ತು. ತಾನು ಸೇವೆ ಮಾಡಿದ ರೀತಿಯಲ್ಲಿಯೇ ಬೇರೆಯವರ ಸೇವೆಯನ್ನು ಮಾಡುವ ಜನರೇ ದೊಡ್ಡವರು ಎಂಬದಾಗಿ ಯೇಸು ಕಲಿಸಿದನು (ಮತ್ತಾಯ 20:25-28). ಆತನು ನ್ಯಾಯತೀರ್ಪಿನ ಸಿಂಹಾಸನದ ಮೇಲೆ ಕೂತುಕೊಳ್ಳುವ ವೇಳೆ, ಆತನ ಬಲಗಡೆಯಲ್ಲಿರುವವರು ನಿತ್ಯಜೀವವನ್ನು ಪಡೆದುಕೊಳ್ಳುವರು ಯಾಕೆಂದರೆ ಅವರು ಬೇರೆಯವರಿಗೆ ಸಹಾಯ ಮಾಡಿದವರಾಗಿದ್ದರು, ಮತ್ತು ಅದರ ಮೂಲಕ ಆತನಿಗೆ ಸೇವೆಯನ್ನು ಮಾಡಿದವರಾಗಿದ್ದರು (ಮತ್ತಾಯ 25:31-40). ದಾಸರು ಭೂಲೋಕದ ಯಜಮಾನರಿಗೆ ಉತ್ತಮವಾಗಿ ಸೇವೆ ಮಾಡುವ ಮೂಲಕವಾಗಿ ಯೇಸುವಿಗೆ ಸೇವೆ ಮಾಡಿದವರಾಗಿದ್ದರು.

ಪೌಲನು ಈ ನಿರ್ದೇಶನಗಳನ್ನು ದಾಸರಿಗಾಗಿ ಬರೆದನಾದರೂ, ಒಬ್ಬ ಮತ್ತೊಬ್ಬನಿಗೆ ಕೆಲಸ ಮಾಡುವದಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದರ ಕಾರಣದಿಂದ ಮತ್ತೊಬ್ಬನಿಗೆ ದುಡಿಯುವ ನಿರ್ಬಂಧ ಹೊಂದಿರುವ ಯಾವನನ್ನಾದರೂ ಸೇರ್ಪಡೆಗೊಳಿಸಲು ವ್ಯಾಪಕವಾದ ಅನ್ವಯವನ್ನು ಮಾಡತಕ್ಕದ್ದು. ಒಬ್ಬ ಉದ್ಯೋಗಿಯು, ತಾನು ದೇವರಿಗೋಸ್ಕರ ಕೆಲಸ ಮಾಡುತ್ತಿದ್ದಾನೋ ಎಂಬಂತೆ ಮನಸ್ಸಾಕ್ಷಿಪೂರ್ವಕವಾಗಿ ಕೆಲಸ ಮಾಡತಕ್ಕದ್ದು. ಆತನು

ತನ್ನ ಧಣಿಗೆ ಒಂದು ದಿನದ ಸಂಬಳಕ್ಕೆ ತಕ್ಕ ಹಾಗೆ ಒಂದು ದಿನದ ಕೆಲಸವನ್ನು ಒದಗಿಸಬೇಕು. ಇಲ್ಲಿ ಯೇಸುವಿನ ಹೇಳಿಕೆಯು ಅನ್ವಯವಾಗುತ್ತದೆ: "ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ" (ಮತ್ತಾಯ 7:12). ಒಬ್ಬ ಭಕ್ತಿವಂತ ಉದ್ಯೋಗಿಯ ಗುರಿಯು, ಮೊದಲು, ಯೇಸುವನ್ನು ಮೆಚ್ಚಿಸುವದೇ ಆಗಿರಬೇಕು; ಎರಡನೆಯದಾಗಿ, ತನ್ನ ಧಣಿಯನ್ನು ಮೆಚ್ಚಿಸುವದಾಗಿರಬೇಕು; ಮತ್ತು ಮೂರನೆಯದಾಗಿ, ತಾನು ತನ್ನ ಕೆಲಸದಲ್ಲಿ ವೈಯಕ್ತಿಕವಾದ ಸಂತೃಪ್ತಿಯನ್ನು ಹೊಂದುವದಕ್ಕೋಸ್ಕರ ದುಡಿಯಬೇಕು (ಗಲಾತ್ಯ 6:4).

### "ಅನ್ಯಾಯಮಾಡುವವನು ತಾನು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರತಿಫಲವನ್ನು ಹೊಂದುವನಷ್ಟೆ" (3:25)

ಅನ್ಯಾಯವನ್ನು ಮಾಡುವ ದಾಸನು – ಮತ್ತು ಯಜಮಾನನು ಸೇರಿದಂತೆ, ಬೇರೆ ಯಾವದೇ ವ್ಯಕ್ತಿಯು – ತಾನು ಮಾಡಿದ ಅನ್ಯಾಯದ ಪರಿಣಾಮವನ್ನು ಅನುಭವಿಸುವನು. ಪೌಲನ ತಾತ್ಪರ್ಯವು ಇಲ್ಲಿ ಕೇವಲ ದಾಸರು ಎಂದಾಗಿದ್ದಲ್ಲಿ, ಆತನು ಹಿಂದಿನ ವಚನದಲ್ಲಿನ "ನೀವು" ("ದಾಸರು") ಎಂಬದರೊಂದಿಗೆ ಹೊಂದಿಕೊಂಡಿರುವಂತೆ ಇಲ್ಲಿ "ನಿಮ್ಮಲ್ಲಿ ಅನ್ಯಾಯ ಮಾಡುವವರು [ಬಹುವಚವನ]" ಎಂದು ಬರೆದಿರುತ್ತಿದ್ದನು. ಬದಲಾಗಿ, ಆತನು **ಅನ್ಯಾಯಮಾಡುವವನು** ಎಂದು ಹೇಳುತ್ತಾನೆ, ಅದರರ್ಥವು "ಅನ್ಯಾಯ ಮಾಡುವ ಯಾವನೇ – ದಾಸನು, ಯಜಮಾನ, ಅಥವಾ ಬೇರೆ ಯಾವನಾದರೂ ಸೇರಿದಂತೆ – ಆಗಲಿ" ಎಂದಾಗಿರುತ್ತದೆ.

ತಕ್ಷಣದ ಸನ್ನಿವೇಶದಲ್ಲಿ, ಅನ್ಯಾಯವೆಂದರೆ ದಾಸರು ತಮ್ಮ ಯಜಮಾನರಿಗೆ ತೋರುವ ಅವಿಧೇಯತೆ ಅಥವಾ ಅಗೌರವ ಆಗಿತ್ತು. ಹೇಗೂ, "ತಾನು" ಎಂದು ಬಳಸುವ ಮೂಲಕ, ಪೌಲನು ಅನ್ಯಾಯವನ್ನು ಮಾಡುವ ಯಾವನನ್ನಾದರೂ ಸಹ ಸೇರಿಸಿ ಒಂದು ವಿಸ್ತಾರವಾದ ಅನ್ವಯವನ್ನು ಮಾಡುತ್ತಾನೆ. ಯೇಸುವು ಸಹ ಅಪೊಸ್ತಲರಿಗೆ ಉಪದೇಶಿಸುವದರಲ್ಲಿ ಅದನ್ನೇ ಮಾಡಿದನು. ಆತನು ಅಪೊಸ್ತಲರ ಸಂಗಡ ಇದ್ದ ವೇಳೆಯಲ್ಲಿ, ಆತನು ಕರ್ತನ ಭೋಜನವನ್ನು ಪ್ರತಿಷ್ಠಾಪಿಸಿದನು.[7] ಈ ಸನ್ನಿವೇಶದಲ್ಲಿ, ಆತನು ಅಪೊಸ್ತಲರೊಂದಿಗೆ ನೇರವಾಗಿ ಮಾತಾಡುವ ವೇಳೆ, "ನೀವು" ಎಂದು ಹೇಳಿದನು (ಯೋಹಾನ 14:19, 20); ಆದರೆ ಆತನು "ಅವನನ್ನು" ಎಂದು ಹೇಳಿದಾಗ (ಯೋಹಾನ 14:21), ಆತನ ತಾತ್ಪರ್ಯವು ಯಾವನೇ ಆಗಲಿ ಎಂದಾಗಿತ್ತು. ಆತನು ಯೋಹಾನ 14-16 ಅಧ್ಯಾಯಗಳಲ್ಲಿನ ತನ್ನ ಪ್ರಸಂಗದುದ್ದಕ್ಕೂ ಹೀಗೆಯೇ ಮಾಡಿದನು.

ಪೌಲನು ಫಿಲೆಮೋನನಿಗೆ ಬರೆದ ತನ್ನ ಪತ್ರಿಕೆಯಲ್ಲಿ ಸಹ "ಅನ್ಯಾಯ" ಮಾಡುವದರ ಬಗ್ಗೆ ಮಾತಾಡುತ್ತಾನೆ (ವ. 18). ಇದರಲ್ಲಿ ದೇವರ ಚಿತ್ತಕ್ಕೆ ವಿರುದ್ಧವಾದ ಯಾವದೇ ಕ್ರಿಯೆಯು ಸೇರಿರುತ್ತದೆ. ಯೇಸುವು ಯಾವದೇ ಪಕ್ಷಪಾತವಿಲ್ಲದೆ (ರೋಮಾ 2:6-11) ಜನರು ಮಾಡುವ ಪ್ರತಿಯೊಂದು ಅನುಚಿತ ಕೃತ್ಯಕ್ಕೆ ನ್ಯಾಯತೀರಿಸುವನು (2 ಕೊರಿಂಥ 5:10). ಪ್ರತಿಕಾರವನ್ನು ಮಾಡುವದು ದೇವರಲ್ಲಿನ ನಿತ್ಯವಾದ ಮೂಲತತ್ವವಾಗಿರುತ್ತದೆ. ಇಸ್ರಾಯೇಲ್ಯರ ವಿರುದ್ಧ ಕ್ರಮ ಕೈಗೊಳ್ಳುವ ವೇಳೆ, ". . . ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ ನ್ಯಾಯವಾದ ಪ್ರತಿಫಲವುಂಟಾಯಿತು" (ಇಬ್ರಿಯ 2:2; ನೋಡಿರಿ ಧರ್ಮೋಪದೇಶಕಾಂಡ 10:17). "ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೆ

ಕೊಯ್ಯಬೇಕು" (ಗಲಾತ್ಯ 6:7).

ನಾವು ಪ್ರಾಮಾಣಿಕವಾಗಿ ಮತ್ತು ಶ್ರದ್ಧೆಯಿಂದ ಸೇವೆ ಮಾಡಬೇಕೆಂಬುದಕ್ಕೆ ಎರಡು ಕಾರಣಗಳು ಕೊಡಲ್ಪಟ್ಟಿರುತ್ತವೆ: ಯೇಸು ತನ್ನ ಸೇವೆ ಮಾಡುವವರಿಗೆ ಪರಲೋಕದ ಬಾಧ್ಯತೆಯನ್ನು ಕೊಡುವನು, ಮತ್ತು ಅನ್ಯಾಯ ಮಾಡುವವರಿಗೆ ಆತನು ದಂಡನೆಯನ್ನು ನೀಡುವನು. ಆತನಿಗೆ ವಿಧೇಯವಾಗುವದಕ್ಕೆ ಪ್ರತಿಫಲ ಸಿಕ್ಕುತ್ತದೆ (ಇಬ್ರಿಯ 5:8, 9), ಆದರೆ ಆತನ ಚಿತ್ತವನ್ನು ಮೀರುವವರಿಗೆ ದಂಡನೆಯಾಗತಕ್ಕದ್ದು (2 ಥೆಸಲೋನಿಕ 1:6-9).

### "ಪಕ್ಷಪಾತವಿರುವದಿಲ್ಲ" (3:25)

ದೇವರು ಯಾವನಿಗೂ ವಿಶೇಷ ಕೃಪಾಕಟಾಕ್ಷವನ್ನು ತೋರುವದಿಲ್ಲ. ಆತನು **ಪಕ್ಷಪಾತವಿಲ್ಲದೆ** ನ್ಯಾಯತೀರಿಸುವನು (ಅಪೊಸ್ತಲರ ಕೃತ್ಯಗಳು 10:34; ರೋಮಾ 2:6, 11; 1 ಪೇತ್ರ 1:17). ಪೌಲನು ತಾನು ದಾಸರಿಗೆ ಕೊಟ್ಟ ಅದೇ ಎಚ್ಚರಿಕೆಯನ್ನು ಯಜಮಾನರಿಗೆ ಸಹ ಕೊಡುತ್ತಾನೆ (ಎಫೆಸ 6:9). ಯೇಸು ಪ್ರತಿಯೊಬ್ಬನಿಗೂ ಒಂದೇ ಮಾನದಂಡದ ಮೇಲೆ, ಆತನು ಯಾವ ಧರ್ಮಶಾಸ್ತ್ರದಡಿಯಲ್ಲಿ ಬದುಕಿದನೋ ಅದೇ ಧರ್ಮಶಾಸ್ತ್ರಕ್ಕನುಗುಣವಾಗಿ ನ್ಯಾಯತೀರಿಸುವನು. ಇಸ್ರಾಯೇಲ್ಯರು ಹಳೆಯ ಒಡಂಬಡಿಕೆಯಲ್ಲಿ ಧರ್ಮಶಾಸ್ತ್ರಾಧೀನರಾಗಿ ಜೀವಿಸಿದ್ದರು ಮತ್ತು ಅವರಿಗೆ ಧರ್ಮಶಾಸ್ತ್ರದ ಪ್ರಕಾರವಾಗಿಯೇ ನ್ಯಾಯತೀರ್ಪು ಆಗುವದು (ರೋಮಾ 2:12). ಧರ್ಮಶಾಸ್ತ್ರದ ಅಡಿಯಲ್ಲಿ ಇಲ್ಲದವರಾಗಿದ್ದ ಅನ್ಯಜನರು ಮನಸ್ಸಾಕ್ಷಿಯ ಮೂಲತತ್ವದ ಅನುಗುಣವಾಗಿ ನ್ಯಾಯತೀರಿಸಲ್ಪಡುವರು (ರೋಮಾ 2:14, 15). ಯೇಸುವು ತನ್ನ ಮರಣದ ಮೂಲಕ ಸಮರ್ಪಣೆ ಮಾಡಿದದಂಥ ಹೊಸ ಒಡಂಬಡಿಕೆಯ (ಇಬ್ರಿಯ 9:15-17) ಅಡಿಯಲ್ಲಿ ಜೀವಿಸುವವರು, ಯೇಸುವಿನ ಬೋಧನೆಗಳ ಮೂಲಕ ನ್ಯಾಯತೀರಿಸಲ್ಪಡುವರು (ಯೋಹಾನ 12:48). ಒಬ್ಬನು ಯಾವ ಪ್ರಮಾಣದಡಿಯಲ್ಲಿ ಜೀವಿಸಿದನೋ ಅದಕ್ಕನುಗುಣವಾಗಿ ಪ್ರತಿಯೊಬ್ಬನಿಗೂ ನ್ಯಾಯತೀರಿಸಲ್ಪಡುತ್ತದಾದ್ದರಿಂದ, ತನಗೆ ಬೇರೆಯವರಿಗಿಂತ ಹೆಚ್ಚಾಗಿ ವಿಶೇಷ ಪರಿಗಣನೆ ಅಥವಾ ಕೃಪೆಯು ಅನುಗ್ರಹಿಸಲ್ಪಡುವದೆಂದು ಯಾವನೂ ಎದುರುನೋಡಕೂಡದು. ತಾವು ವಿಶೇಷವಾದ ಉಪಚಾರಕ್ಕೆ ಯೋಗ್ಯರೆಂದು ನಂಬುವವರು ಕೃಪಾವರವಾಗಿರುವ ಆತ್ಮನನ್ನು ಅವಮಾನಿಸಿದವರಾಗುತ್ತಾರೆ (ಇಬ್ರಿಯ 10:29).

ನ್ಯಾಯತೀರ್ಪಿನ ದಿನದಂದು, ಮೌಲ್ಯಮಾಪನದ ಮಾನದಂಡವು ಒಬ್ಬ ವ್ಯಕ್ತಿಯು ಖ್ಯಾತಿ ಅಥವಾ ಸಮುದಾಯದಲ್ಲಿ ಆತನ ಸ್ಥಾನಮಾನ ಆಗಿರುವದಿಲ್ಲ. ಚಹರೆ, ಸ್ವತ್ತುಗಳು, ಸಾಮರ್ಥ್ಯಗಳು, ಆರ್ಥಿಕ ಸ್ಥಿತಿಗತಿ, ಮತ್ತು ಇತರೆ ವೈಯಕ್ತಿಕ ಲಾಭಗಳಾಗಲಿ ಯಾವದೇ ವ್ಯಕ್ತಿಯನ್ನು ವಿಶೇಷವಾದ ಕೃಪಾಕಟಾಕ್ಷದಿಂದ ನ್ಯಾಯತೀರಿಸುವಂತೆ ದೇವರನ್ನು ಮನವೊಲಿಸುವದಿಲ್ಲ. ದಾಸರು, ಯಜಮಾನರು, ಮತ್ತು ಇತರ ಎಲ್ಲಾ ಜನರು ದೇವರ ದೃಷ್ಟಿಯಲ್ಲಿ ಸಮಾನ ಸ್ಥಾನದಲ್ಲಿದ್ದಾರೆ. ಯಾರಿಗೂ ಬೇರೆ ಇನ್ನಾರಿಗಿಂತಲೂ ವಿಶೇಷ ಸವಲತ್ತು ಇರುವದಿಲ್ಲ ಯಾಕೆಂದರೆ ದೇವರು ಎಲ್ಲರನ್ನೂ ಒಂದೇ ರೀತಿ ಕಾಣುತ್ತಾನೆ.

## ಯಜಮಾನರು ದಾಸರಿಗೆ (4:1)

**1ಯಜಮಾನರೇ, ಪರಲೋಕದಲ್ಲಿ ನಿಮಗೂ ಯಜಮಾನನೊಬ್ಬನಿದ್ದಾನೆಂದು ತಿಳಿದು**

ನಿಮ್ಮ ದಾಸರಿಗೆ ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ಮಾಡಿರಿ.

## “ಯಜಮಾನರೇ, ಪರಲೋಕದಲ್ಲಿ ನಿಮಗೂ ಯಜಮಾನನೊಬ್ಬನಿದ್ದಾನೆಂದು ತಿಳಿದು ನಿಮ್ಮ ದಾಸರಿಗೆ ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ಮಾಡಿರಿ”

ಗ್ರೀಕ್ ಪದವಾದ κύριοι (*kurioi*, “ಕರ್ತರು”; ನೋಡಿರಿ 3:22) ಎಂಬುದು ಬಹುವಚನದಲ್ಲಿ **ಯಜಮಾನರೇ** ಎಂದು ಅನುವಾದಿಸಲ್ಪಟ್ಟಿದೆ, ಆದರೆ ಅದು ಏಕವಚನದಲ್ಲಿ ಯೇಸುವನ್ನು ಸೂಚಿಸುವಂತೆ “ಕರ್ತನು” ಎಂದಾಗಿರುತ್ತದೆ (1:3, 10; 2:6; 3:13, 17, 18, 20, 23, 24; 4:7, 17). ಬಹುಪಾಲು ಆದಿ ಕ್ರೈಸ್ತರು ಶ್ರೀಮಂತರಾಗಿರಲಿಲ್ಲ, ಮತ್ತು ಅವರಲ್ಲಿ ಹಲವಾರು ಜನರು **ದಾಸರಾ**ಗಿದ್ದರು. ಆದುದರಿಂದ, ಆ ಪ್ರಕಾರ ನೋಡುವಾಗ ಅವರಲ್ಲಿ ಕೆಲವರು ಮಾತ್ರವೇ ದಾಸರಿಗೆ ಒಡೆಯರಾಗಿದ್ದರು. ಈ ಕಾರಣದಿಂದಲೇ ಪೌಲನು ದಾಸರ ಯಜಮಾನರಿಗಾಗಿ ವಿಸ್ತರವಾದ ಬೋಧನೆಗಳನ್ನು ನೀಡಲಿಲ್ಲವೆಂದು ತೋರುತ್ತದೆ.

ದಾಸರಿಗೆ ಇಬ್ಬರು ಕರ್ತರು ಅಥವಾ ಯಜಮಾನರು ಇದ್ದರು, ಒಬ್ಬ ಭೂಲೋಕದವನು ಮತ್ತು ಇನ್ನೊಬ್ಬನು ಪರಲೋಕದವನು. ದಾಸರನ್ನು ಸ್ವತ್ತುಗಳೆಂದು ಎಣಿಸಲಾಗುತ್ತಿತ್ತಾದ್ದರಿಂದ, ಯಜಮಾನರು ಅಥವಾ ಕೆಲಸ ಮಾಡಿಸುವವರು ಇವರ ಜೊತೆಯಲ್ಲಿ ಕೆಲವು ಸಾರಿ ಮನುಷ್ಯರಂತಲ್ಲದೆ ಪ್ರಾಣಿಗಳೋ ಎಂಬ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಆ ದಿನಗಳಲ್ಲಿನ ಕಾನೂನುಗಳು ಅವರಿಗೆ ಯಾವದೇ ಭದ್ರತೆಯನ್ನು ಒದಗಿಸಿರಲಿಲ್ಲ ಆದರೆ ಯಜಮಾನರಿಗೆ ಅವರ ಮೇಲೆ ವೆಚ್ಚಮಾಡಬಹುದಾದ ಸ್ವತ್ತುಗಳೆಂಬಂತೆ ಅಧಿಕಾರವನ್ನು ಒದಗಿಸಿದ್ದವು.

ಕ್ರೈಸ್ತ ಯಜಮಾನರು ದಾಸರಿಗಾಗಿ ಕಳಕಳಿಯುಳ್ಳವರಾಗಿರಬೇಕಿತ್ತು ಮತ್ತು ಅವರಿಗೆ **ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ** ಮಾಡಬೇಕಿತ್ತು. δίκαιος (*dikaios*, “ನ್ಯಾಯ”) ಎಂಬ ಪದದ ವಿವಿಧ ರೂಪಗೂ “ಸರಿ” (ಫಿಲಿಪ್ಪಿ 4:8) ಮತ್ತು “ನೀತಿ” (ರೋಮಾ 3:10) ಎಂದು ಅನುವಾದಿಸಲ್ಪಟ್ಟಿರುತ್ತವೆ. “ಸರಿಯಾದದ್ದು” (ἰσότης, *isotēs*) ಎಂಬುದು ಹೊಸ ಒಡಂಬಡಿಕೆಯೊಳಗೆ ಬೇರೆ ಎರಡು ವಚನಗಳಲ್ಲಿ ಕಾಣಿಸಿಕೊಳ್ಳುತ್ತದೆ (2 ಕೊರಿಂಥ 8:13, 14), ಅಲ್ಲಿ ಅದು ಸರಿಯಾದ ಸಮತೋಲನದಲ್ಲಿ ಹಿಡಿದುಕೊಳ್ಳಬೇಕೆಂಬ ಅರ್ಥದಲ್ಲಿ “ಸಮಾನತ್ವ” ಎಂದು ಅನುವಾದಿಸಲ್ಪಟ್ಟಿದೆ. ಈ ಎರಡು ಪದಗಳನ್ನು “ಮತ್ತು” ಎಂಬದರಿಂದ ಜೋಡಣೆಗೊಳಿಸಿರುವದರ ಅರ್ಥವು, ಯಜಮಾನರು ತಮ್ಮ ದಾಸರ ವಿಷಯದಲ್ಲಿ ನ್ಯಾಯವಾದ ಮತ್ತು ಸಮಸಂಜಸವಾದ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬದೆ. ಯಜಮಾನರು ದಾಸರನ್ನು, ಜೊತೆ ಮಾನವ ಜೀವಿಗಳೆಂದು, ಸಮಾನರೆಂಬ ಭಾವನೆಯಿಂದ ಕಾಣಬೇಕೆಂಬುದು ಪೌಲನ ತಾತ್ಪರ್ಯವಾಗಿರಬಹುದಾಗಿದೆ. ಇದೊಂದು ಕ್ರಾಂತಿಕಾರಿ ಭಾವನೆಯಾಗಿತ್ತು. ಖಂಡಿತವಾಗಿಯೂ, ದಾಸನನ್ನು ಸ್ವತಂತ್ರನಂತೆಯೇ ಸಮಾನ ಹಕ್ಕುಗಳುಳ್ಳವನು ಕಾಣುವದು ಅಥವಾ ಸ್ವತಃ ಯಜಮಾನರಂತೆಯೇ ಸಮಾನತೆಯುಳ್ಳವರೆಂದು ಎಣಿಸುವದು ಒಂದು ರೂಢಿಯಲ್ಲಿದ್ದ ಆಚಾರವಾಗಿರಲಿಲ್ಲ. ಹಾಗಿದ್ದರೂ, ಯೇಸುವಿನ ಈ ಪ್ರಧಾನ ಬೋಧನೆಯು – ಒಬ್ಬನು ಮತ್ತೊಬ್ಬರು ತನಗೆ ಏನೇನು ಮಾಡಬೇಕೆಂದು ಬಯಸುತ್ತಾನೋ ಅದನ್ನು ಅವರಿಗೆ ಮಾಡುವದು (ಮತ್ತಾಯ 7:12) – ಯಜಮಾನರಿಗೆ ಸಹ ಅನ್ವಯವಾಗುವದಾಗಿತ್ತು.

ತಮ್ಮ ದಾಸರನ್ನು ಸ್ವತಂತ್ರಗೊಳಿಸಬೇಕೆಂದು ಪೌಲನು ನಿರ್ದಿಷ್ಟವಾಗಿ

ಯಜಮಾನರಿಗೆ ಹೇಳಲಿಲ್ಲ. ನಾಗರಿಕ ಕಾನೂನುಗಳು ಇದರ ಅಗತ್ಯತೆಯನ್ನು ಎತ್ತಿ ಹೇಳಿರಲಿಲ್ಲ, ಮತ್ತು ಕ್ರೈಸ್ತರು ಸರ್ಕಾರಕ್ಕೆ ಅವಿಧೇಯರಾಗಲಿಲ್ಲ. ಹೇಗೂ, ಎಲ್ಲೆಡೆಯೂ ಹುಳಿಯನ್ನು ಹರಡಿಸುವ ಹುಳಿಹಿಟ್ಟಿನ ಪರಿಣಾಮದ ರೀತಿಯಲ್ಲಿ, ಕ್ರಿಸ್ತನ ಮೂಲತತ್ವಗಳು ಸಮಾಜದ ಮೇಲೆ ಪ್ರಭಾವವನ್ನು ಬೀರಿದವು. ಬದಲಾವಣೆಯನ್ನು ತರುವದಕ್ಕಾಗಿ ಯೇಸು ಅನುಸರಿಸಿದ ದಾರಿಯು ಬಾಹ್ಯ ಶಕ್ತಿಯಿಂದ ಅಥವಾ ಮೂಲಾಗ್ರಹವಾಗಿ ಸಮಾಜದ ಕ್ರಾಂತಿಯಿಂದಾಗಲಿ ಆಗಿರಲಿಲ್ಲ. ಆತನ ವಿಧಿಗಳು ಕ್ರಾಂತಿಕಾರಕವಾಗಿದ್ದವಾದರೂ, ಅವುಗಳು ಸಮಾಜಿಕ ಬದಲಾವಣೆಯಲ್ಲಿ ಫಲಿತಗೊಳ್ಳುವಂತ ಆಂತರ್ಯದ ಮಾರ್ಪಾಡುಗಳನ್ನಷ್ಟೆ ತರುವಂಥವುಗಳಾಗಿದ್ದವು. ಯಜಮಾನರಿಗೆ ದಾಸರನ್ನು ಮಾನವರೆಂದು ಪರಿಗಣಿಸಿ ನಡಿಸಿಕೊಳ್ಳಬೇಕೆಂದು ಯೇಸು ನೀಡಿದ ಪ್ರೋತ್ಸಾಹದ ನಿಮಿತ್ತವಾಗಿ, ಅನೇಕ ಯಜಮಾನರು ತಮ್ಮ ದಾಸರಿಗೆ ಸ್ವಾತಂತ್ರ್ಯವನ್ನು ದಯಪಾಲಿಸಿದರು.

ದಾಸರಿಗೆ ಯಜಮಾನರಾಗಿರುವ ಕ್ರೈಸ್ತರು, ಕ್ರಿಸ್ತನ ದಾಸರಾಗಿ, ಅವರಿಗೆ ಸಹ **ಪರಲೋಕದಲ್ಲಿ ಯಜಮಾನನೊಬ್ಬನಿದ್ದಾನೆ** ಎಂಬುದನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿತ್ತು. ತಾವು ಹೇಗೆ ತಮಗೆ ದಾಸರು ವಿಧೇಯರಾಗಬೇಕು ಮತ್ತು ಮೆಚ್ಚಿಸಬೇಕು ಎಂದು ಬಯಸುತ್ತಾರೋ ಹಾಗೆಯೇ, ಈ ಯಜಮಾನರು ಕ್ರಿಸ್ತನನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸಬೇಕಿತ್ತು. ಅವರು ಯಾವಾಗಲೂ ತಮ್ಮ ದಾಸರ ಮೇಲೆ ಕಣ್ಣಿಟ್ಟಿರುವದಕ್ಕೆ ಅಶಕ್ತರಾಗಿದ್ದರೆ, ಅವರ ಪರಲೋಕದ ಯಜಮಾನನ ದೃಷ್ಟಿಯಿಂದ ಯಾವದೂ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ.

## ಹೆಚ್ಚಿನ ಅಧ್ಯಯನಕ್ಕಾಗಿ: ಸ್ತ್ರೀಯರು ಅಧೀನರಾಗಿರುವದು ಸಂಸ್ಕೃತಿಗೆ ಸಂಬಂಧಪಟ್ಟ ವಿಷಯವೋ?

ಗಂಡಂದಿರಿಗೆ ಹೆಂಡತಿಯರು ಹೊಂದಿರುವ ಸಂಬಂಧದಲ್ಲಿ, ಹೆಂಡತಿಯರು ಇನ್ನು ಮೇಲೆ ಗಂಡಂದಿರಿಗೆ ಅಧೀನರಾಗಿರಬೇಕಾಗಿರುವದಿಲ್ಲ ಯಾಕೆಂದರೆ ಪೌಲನು ಕೇವಲ ಮೊದಲ ಶತಮಾನದ ಸಂಸ್ಕೃತಿಯಲ್ಲಿ ಅಂಗೀಕರಿಸಲ್ಪಟ್ಟಿದ್ದನ್ನಷ್ಟೆ ಅಥವಾ ಸಂಸ್ಕೃತಿಯಲ್ಲಿದ್ದ ಶೋಷಣೆಯನ್ನು ಸರಿಪಡಿಸುವದಕ್ಕಷ್ಟೆ ಹೇಳುತ್ತಿದ್ದಾನೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಹೇಗೂ, ಶಾಸ್ತ್ರಗಳಲ್ಲಿ ಸ್ತ್ರೀಯರಿಗೆ ಕೊಡಲಾಗಿರುವ ಬೋಧನೆಗಳು ಸಂಸ್ಕೃತಿಯನ್ನು ಆಧರಿಸಿರುವದಿಲ್ಲ. ಬೇರೆಯವರಿಗೆ ಅಧೀನರಾಗಿರುವದರ ವಿಷಯದಲ್ಲಿ, Eduard Schweizer ಹೀಗೆ ಬರೆಯುತ್ತಾನೆ, "ಸರಿಯಾಗಿ ನೋಡುವದಾದಲ್ಲಿ, ಅದನ್ನು ಬೇರೆ ಜನರಿಗೆ ಅಲ್ಲ ಆದರೆ ಕರ್ತನಿಗೆ ಅಧೀನವಾಗಿರುವಿಕೆ" ಎಂದು ತಿಳಿಯತಕ್ಕದ್ದು (ಕೊಲೊಸ್ಸೆ 3:23). ಮೂಲತಃ ಇದು ಗಮನವಿಟ್ಟು ನೋಡಿದ್ದು ಪ್ರತಿಯೊಬ್ಬ ಮಾನವ ಯಜಮಾನನಿಂದ ಸಂಪೂರ್ಣ ಬಿಡುಗಡೆಗಿಂತಲೂ ಕಡಿಮೆಯಾದದ್ದಾಗಿರಲಿಲ್ಲ."[8]

*ಶಾಸ್ತ್ರಗಳು ಆದಿಯ ಕಡೆಗೆ ಬೆರಳು ತೋರಿಸುತ್ತವೆ.* ಪೌಲ ಮತ್ತು ಪೇತ್ರರ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ:

> ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ; ಅದೇನಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, *ಸ್ತ್ರೀಗೆ ಪುರುಷನು ತಲೆ,* ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ.

. . . ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ; *ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು*. ಇದಲ್ಲದೆ ಪುರುಷನು ಸ್ತ್ರೀನಿಮಿತ್ತವಾಗಿ ನಿರ್ಮಾಣವಾಗಲಿಲ್ಲ, *ಸ್ತ್ರೀಯು ಪುರುಷನ ನಿಮಿತ್ತವಾಗಿ ನಿರ್ಮಾಣವಾದಳು* (1 ಕೊರಿಂಥ 11:3, 8, 9; ಒತ್ತಿ ಹೇಳಿದ್ದು ನನ್ನದು).

ಸ್ತ್ರೀಯರು . . . *ಅಧೀನದಲ್ಲಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ* (1 ಕೊರಿಂಥ 14:34; ಒತ್ತಿ ಹೇಳಿದ್ದು ನನ್ನದು).

ಉಪದೇಶಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ; ಅವರು ಮೌನವಾಗಿರಬೇಕು. *ಮೊದಲು ನಿರ್ಮಿತವಾದವನು ಆದಾಮನಲ್ಲವೇ, ಆಮೇಲೆ ಹವ್ವಳು* (1 ತಿಮೊಥೆ 2:12, 13; ಒತ್ತಿ ಹೇಳಿದ್ದು ನನ್ನದು).

*ಪೂರ್ವಕಾಲದಲ್ಲಿ* ದೇವರ ಮೇಲೆ ನಿರೀಕ್ಷೆಯಿಟ್ಟ ಭಕ್ತೆಯರಾದ ಸ್ತ್ರೀಯರು ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. ಅವರು ತಮ್ಮ ಗಂಡಂದಿರಿಗೆ ಅಧೀನರಾಗಿದ್ದು (1 ಪೇತ್ರ 3:5; ಒತ್ತಿ ಹೇಳಿದ್ದು ನನ್ನದು).

ಪೌಲನು ಹೀಗೆ ಬರೆಯುವ ಮೂಲಕ ದೇವರ ಸೃಷ್ಟಿಯ ಕ್ರಮವನ್ನು ಎತ್ತಿ ತೋರಿಸುತ್ತಾನೆ, "ಪುರುಷನು ಸ್ತ್ರೀಗೆ ತಲೆ"; "ಸ್ತ್ರೀಯು ಪುರುಷನಿಂದ [ಉತ್ಪತ್ತಿಯಾದಳು]"; "ಸ್ತ್ರೀಯು ಪುರುಷನ ನಿಮಿತ್ತವಾಗಿ [ನಿರ್ಮಾಣವಾದಳು]"; "[ಸ್ತ್ರೀಯರು] ಅಧೀನರಾಗಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ"; ಮತ್ತು "ಮೊದಲು ನಿರ್ಮಿತವಾದವನು ಆದಾಮನಲ್ಲವೇ, ಆಮೇಲೆ ಹವ್ವಳು." ಪೇತ್ರನು ದೇವರಿಂದ ಅಂಗೀಕರಿಸಲ್ಪಟ್ಟವರಾಗುವದಕ್ಕೆ ಪ್ರಯತ್ನಿಸುತ್ತಿದ್ದ ಕ್ರೈಸ್ತ ಸ್ತ್ರೀಯರಿಗೆ "ಪೂರ್ವಕಾಲದ" ಭಕ್ತೆಯರಾದ ಸ್ತ್ರೀಯರ ಉದಾಹರಣೆಯನ್ನು ಕೊಡುತ್ತಾನೆ.

ಕೆಲವರು ಹೀಗೆ ಕೇಳಿರುತ್ತಾರೆ, "ಧರ್ಮಶಾಸ್ತ್ರದೊಳಗೆ ಎಲ್ಲಿ ಸ್ತ್ರೀಯರು ಪುರುಷರಿಗೆ ಅಧೀನರಾಗಿರಬೇಕೆಂದು ಹೇಳಲ್ಪಟ್ಟಿದೆ?" (ನೋಡಿರಿ 1 ಕೊರಿಂಥ 14:34) ಯಾಕೆಂದರೆ ಅವರಿಗೆ ಧರ್ಮಶಾಸ್ತ್ರದಲ್ಲಿ ಮತ್ತು ಮೋಶೆಗೆ ಪ್ರಕಟಿಸಲ್ಪಟ್ಟ ನಿಬಂಧನೆಗಳೊಳಗೆ ಅಂಥ ಯಾವದೇ ಹೇಳಿಕೆಯು ಕಂಡು ಬಂದಿರುವದಿಲ್ಲ. ಈ ಪ್ರಶ್ನೆಗೆ ಈ ಕೆಳಗಿನ ಉತ್ತರವನ್ನು ಕೊಡಬಹುದು: ಯೇಸು ಕೆಲವು ಸಾರಿ ಮೋಶೆಯ ಧರ್ಮಶಾಸ್ತ್ರದಲ್ಲಿ ಇಲ್ಲದಂಥ ಹಳೆಯ ಒಡಂಬಡಿಕೆಯ ಹೇಳಿಕೆಗಳನ್ನು ಉಲ್ಲೇಖಿಸುವದಕ್ಕೆ ಧರ್ಮಶಾಸ್ತ್ರವನ್ನು ಸೂಚಿಸಿದನು (ನೋಡಿರಿ ಕೀರ್ತನೆ 82:6, ಇದು ಯೋಹಾನ 10:34ರಲ್ಲಿ ಉಲ್ಲೇಖಿಸಲ್ಪಟ್ಟಿದೆ; ಕೀರ್ತನೆ 35:19, ಇದು ಯೋಹಾನ 15:25ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅಷ್ಟುಮಾತ್ರವಲ್ಲದೆ, ತಾನು ಯೆಶಾಯ 28:11, 12ನ್ನು ಉಲ್ಲೇಖನ ಮಾಡುತ್ತಿದ್ದಾಗ್ಯೂ, ಪೌಲನು 1 ಕೊರಿಂಥ 14:21ರಲ್ಲಿನ ತನ್ನ ಉಪದೇಶಕ್ಕೆ ಬೆಂಬಲವಾಗಿ ಧರ್ಮಶಾಸ್ತ್ರದ ಹೆಸರನ್ನು ಬಳಸುತ್ತಾನೆ. ಈ ಪ್ರಶ್ನೆಯ ಅಂಶಕ್ಕೆ ಇನ್ನಷ್ಟು ಉತ್ತರವೆಂದರೆ ಗಲಾತ್ಯ 4:21, 22ರಲ್ಲಿ ಪೌಲನು ಸಾರಳು ಮತ್ತು ಹಾಗರಳನ್ನು ಹೆಸರಿಸುತ್ತಾ ಪರೋಕ್ಷವಾಗಿ ಧರ್ಮಶಾಸ್ತ್ರಕ್ಕೆ ಹೋಲಿಕೆ ಮಾಡುತ್ತಾನೆ. ಸ್ಪಷ್ಟವಾಗಿರುವ ಪ್ರಕಾರ, ಪೌಲನು ಧರ್ಮಶಾಸ್ತ್ರವೆಂದು ಕರೆಯುವದು ದೇವರು ಮೋಶೆಗೆ

ದಯಪಾಲಿಸಿದ ಧರ್ಮಶಾಸ್ತ್ರಕ್ಕಷ್ಟೆ ಸೀಮಿತವಾಗಿರುವದಿಲ್ಲ. ಪೌಲನು, ಒಂದು ವಿಸ್ತಾರವಾದ ಅರ್ಥದಲ್ಲಿ, ಆದಿಕಾಂಡ ಪುಸ್ತಕವನ್ನು ಸಹ ಧರ್ಮಶಾಸ್ತ್ರದ ಭಾಗವೆಂದು ಪರಿಗಣಿಸಿದ್ದನು. ಹೀಗೆ, ಆತನ ದೃಷ್ಟಿಯಲ್ಲಾದರೋ, ಧರ್ಮಶಾಸ್ತ್ರವು ". . . ಅವನು ನಿನಗೆ ಒಡೆಯನಾಗುವನು" ಎಂದು ಹೇಳುತ್ತದೆ ಎಂಬದಾಗಿ ಆತನು ಹೇಳಿದ್ದು ನಿಖರವಾದದ್ದಾಗಿತ್ತು (ಆದಿಕಾಂಡ 3:16).

*ಪೌಲನು ಸ್ತ್ರೀಯರಿಗೆ ನೀಡಿದ ಬೋಧನೆಗಳು ಸಂಸ್ಕೃತಿ-ಪ್ರತಿಕೂಲ ಆಗಿದ್ದವು.* ಆತನ ಕ್ರೈಸ್ತ ಸ್ತ್ರೀಯರಿಗೆ ನೀಡಿದ ಬೋಧನೆಗಳು (1 ಕೊರಿಂಥ 14:34, 35; 1 ತಿಮೊಥೆ 2:11, 12) ಅವರು ಜೀವಿಸುತ್ತಿದ್ದ ಸಮುದಾಯಗಳ ಸಾಂಸ್ಕೃತಿಕ ಆಚಾರಗಳ ಮೇಲೆ ಆಧಾರವಾದವುಗಳಾಗಿರಲಿಲ್ಲ. ಗ್ರೀಕ್-ರೋಮನ್ ಸಂಸ್ಕೃತಿಯಲ್ಲಿ, ಸ್ತ್ರೀಯರು ಸಮಾಜದಲ್ಲಿ ನಾಯಕತ್ವದ ಪಾತ್ರಗಳನ್ನು ವಹಿಸಿಕೊಳ್ಳುತ್ತಿದ್ದರು. ಹೊಸ ಒಡಂಬಡಿಕೆಯ ಜಗತ್ತಿನಲ್ಲಿ ಸ್ತ್ರೀಯರ ಸ್ಥಾನಮಾನದ ಬಗ್ಗೆ ದೃಷ್ಟಾಂತಪಡಿಸುವಂಥ ಉಲ್ಲೇಖನಗಳೂ ಈ ಕೆಳಗಿನಂತಿರುತ್ತವೆ:

> ಸ್ತ್ರೀಯರು ಅನೇಕ ಸಾರ್ವಜನಿಕ ಹುದ್ದೆಗಳನ್ನು ವಹಿಸಿಕೊಂಡಿದ್ದರು ಮತ್ತು ಅವರು ಪುರುಷರಂತೆಯೇ ತಮ್ಮ ಸಾರ್ವಜನಿಕ ಕರ್ತವ್ಯಗಳನ್ನು ಚಲಾಯಿಸಬೇಕಾಗಿತ್ತೆಂಬುದನ್ನು ಸೂಚಿಸುವದಕ್ಕೆ ಸಾಕಷ್ಟು ಪುರಾವೆಯಿರುತ್ತದೆ. ಅಧಿಕೃತ ಶಿಲಾಶಾಸನಗಳ ದಾಖಲೆಗಳಲ್ಲಿ ಸ್ತ್ರೀಯರ ಹೆಸರುಗಳು ಅವರ ಸಾರ್ವಜನಿಕ ಸೇವೆ ಮತ್ತು ಔದಾರ್ಯತೆಯ – ಗೌರವಾರ್ಥವಾಗಿ – ದಾಖಲಿಸಲ್ಪಟ್ಟಿರುತ್ತವೆ. ಅವರು ದೇವಸ್ಥಾನಗಳನ್ನು ನಿರ್ವಹಿಸುತ್ತಿದ್ದರು ಮತ್ತು ಕ್ರೀಡೆಗಳನ್ನು, ಮೆರವಣಿಗೆಗಳನ್ನು, ಮತ್ತು ಯಜ್ಞಗಳನ್ನು ಪ್ರಾಯೋಜಿಸುತ್ತಿದ್ದರು.[9]

> ಸ್ತ್ರೀಯರು ಬಹುಪಾಲು ವಿಗ್ರಹಾರಾಧಕ ಕುಪಂಥಗಳಲ್ಲಿ, ಡಯಾನಾ, ಐಶಿಸ್, ಲಿವಿಯಾ, ಡಿಯೊನಿಸೊಸ್ ಮತ್ತು ಲಿಬಿರ ಹಾಗೂ ಲಿಬೆರಾ ಸೇರಿದಂತೆ ಅನೇಕ ದೇವತೆಗಳ ಯಾಜಕಿಯರಾಗಿಯೂ ನಾಯಕರಾಗಿಯೂ ಸೇವೆ ಮಾಡುತ್ತಿದ್ದರು. ಅವರು ಸಾರ್ವಜನಿಕ ಆರಾಧನೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿರುತ್ತಿದ್ದರು, ಸಂಗೀತಗಳನ್ನು ರಚಿಸುತ್ತಿದ್ದರು ಮತ್ತು ಧಾರ್ಮಿಕ ವಿಧಿಗಳನ್ನು ನಡಿಸುತ್ತಿದ್ದರು, ದೇವಸ್ಥಾನದ ಆಡಳಿತವನ್ನು ಮತ್ತು ಕುಪಂಥದ ಹಣಕಾಸಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು, ಹಬ್ಬದ ದಿನದ ಕೊಂಡಾಟಗಳನ್ನು ಸಂಘಟಿಸುತ್ತಿದ್ದರು, ಸಂಗೀತ ನುಡಿಸುತ್ತಿದ್ದರು ಮತ್ತು ಬೃಹತ್ ಸಂಖ್ಯೆಯ ಜನರಿಗೆ ಪ್ರಭಾವ ಬೀರುವಂಥ ನಾಯಕತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು.[10]

> . . . ಗ್ರೀಕೀಕರಣದ ಯುಗ (Hellenistic age) ಸಾಮಾನ್ಯವಾಗಿ ಸ್ತ್ರೀಯರಿಗೆ ಒಂದು ವಿಮೋಚನೆಯ ಕಾಲವಾಗಿತ್ತು . . . ಪೌಲನ ದಿನಗಳಲ್ಲಿ ಸ್ತ್ರೀಯರಿಗೆ ಗಮನಾರ್ಹ ಪ್ರಮಾಣದಲ್ಲಿ ಚಲನವಲನದ ಸ್ವತಂತ್ರ್ಯ, ವಿವಾಹ ಹಾಗೂ ವಿಚ್ಛೇದನಗಳಲ್ಲಿ ಹಕ್ಕುಗಳು ಇದ್ದವು, ಮತ್ತು ಕೆಲವು ಸ್ಥಳಗಳಲ್ಲಿ ಹಾಗೂ ಕೆಲವು ಕುಪಂಥಗಳಲ್ಲಿ, ಸಾರ್ವಜನಿಕ ಮತ್ತು ಧಾರ್ಮಿಕ ಹುದ್ದೆಗಳನ್ನು ವಹಿಸಿಕೊಳ್ಳುವ ಅಧಿಕಾರವಿತ್ತು . . . ಗ್ರೀಕ್ ಸ್ತ್ರೀಯರು ಮುಸುಕು ಹಾಕಿಕೊಳ್ಳುವದನ್ನು ಬಿಟ್ಟುಬಿಟ್ಟಿದ್ದರು ಮತ್ತು ಅಸಂಖ್ಯಾತವಾದ ಕೇಶಲಂಕಾರದ ಶೈಲಿಗಳನ್ನು ಪ್ರಯೋಗಮಾಡಿ ನೋಡಿಕೊಳ್ಳುತ್ತಿದ್ದರು.[11]

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ, ಸ್ತ್ರೀಯರು ತಮ್ಮ ಸಮುದಾಯಗಳಲ್ಲಿ ಪ್ರಾಬಲ್ಯವನ್ನು ಸಾಧಿಸಿದ್ದರು ಮತ್ತು ಪುರುಷರ ಸಂಗಡ ಪೂರ್ವಭಾವಿಯಾಗಿ ಕಾರ್ಯನಿರ್ವಹಿಸುವದಕ್ಕೆ ಅವಕಾಶ ಕೊಡಲ್ಪಟ್ಟವರಾಗಿದ್ದರೆಂಬುದನ್ನು ಸೂಚಿಸುವಂಥ ಸ್ತ್ರೀಯರ ಚಟುವಟಿಕೆಗಳನ್ನು ಲೂಕನು ದಾಖಲಿಸಿರುತ್ತಾನೆ. ಪಿಸಿದ್ಯದ ಅಂತಿಯೋಕ್ಯದಲ್ಲಿ ಪೌಲ ಮತ್ತು ಬಾರ್ನಬರ ಮೇಲೆ ಹಿಂಸೆಯನ್ನು "ಕುಲೀನ ಸ್ತ್ರೀಯರು" ಮತ್ತು "ಊರಿನ ಪ್ರಮುಖರು" ಪ್ರಚೋದಿಸಿದರು (ಅಪೊಸ್ತಲರ ಕೃತ್ಯಗಳು 13:50), ಮತ್ತು ಥೆಸಲೋನಿಕದಲ್ಲಿ ಪ್ರಮುಖ ಸ್ತ್ರೀಯರಲ್ಲಿ ಅನೇಕರು ಕ್ರೈಸ್ತರಾದರು (ಅಪೊಸ್ತಲರ ಕೃತ್ಯಗಳು 17:4).

ಶಾಸ್ತ್ರಗಳಲ್ಲಿ ಅನುಮತಿಯಿಲ್ಲದಂಥ ಪಾತ್ರಗಳನ್ನು ಸಮಾಜವು ಸ್ತ್ರೀಯರಿಗೆ ಕೊಡಬಹುದಾದರೂ, ಕ್ರೈಸ್ತ ಸ್ತ್ರೀಯರು ಲೋಕದ ಪ್ರಭಾವವನ್ನು ಅನುಸರಿಸಬಾರದು (ರೋಮಾ 12:2). ಅವರ ಗುರಿಯು ಯೇಸುವಿನ ಆಜ್ಞೆಗಳಿಗೆ ವಿಧೇಯರಾಗುವದೇ ಆಗಿರಬೇಕು, ಅವುಗಳು ಸಮಾಜದಲ್ಲಿ ಹೆಚ್ಚು ಪ್ರಾಧಾನ್ಯತೆಯುಳ್ಳ ಸಾಂಸ್ಕೃತಿಕ ಆಚಾರಗಳಿಗೆ ವಿರುದ್ಧವಾಗಿದ್ದರೂ ಸರಿಯೇ ವಿಧೇಯರಾಗಬೇಕು. ಸ್ತ್ರೀಯರು, "ಸಮಾಜವು ನನ್ನಿಂದ ಏನನ್ನು ಎದುರು ನೋಡುತ್ತದೆ?" ಎಂದು ಕೇಳಿಕೊಳ್ಳದೆ "ಯೇಸುವು ನನ್ನಿಂದ ಏನನ್ನು ಎದುರುನೋಡುತ್ತಾನೆ?" ಎಂದು ಕೇಳಿಕೊಳ್ಳಬೇಕು.

# ಅನ್ವಯಿಸುವಿಕೆ

## ಕುಟುಂಬ ಸಂಬಂಧಗಳು

ಗಂಡನು ತನ್ನ ಹೆಂಡತಿಯನ್ನು ಪ್ರೀತಿಸಬೇಕು ಮತ್ತು ಹೆಂಡತಿಯು ತನ್ನ ಗಂಡನನ್ನು ಪ್ರೀತಿಸಬೇಕು, ತಂದೆತಾಯಿಗಳು ತಮ್ಮ ಮಕ್ಕಳನ್ನು ಪ್ರೀತಿಸಬೇಕು ಎಂಬದಾಗಿ ದೇವರು ಅಪೇಕ್ಷಿಸುತ್ತಾನೆ (ಎಫೆಸ 5:25; ತೀತನಿಗೆ 2:4). ಕುಟುಂಬಗಳು ಒಬ್ಬರ ಮೇಲೊಬ್ಬರು ಪ್ರೀತಿಯನ್ನು – ತಂದೆಯು ಮಗನ ಮೇಲೆ ಹೊಂದಿರುವ (ಯೋಹಾನ 3:35; 5:20; 17:23, 24) ಮತ್ತು ಮಗನು ತಂದೆಯ ಮೇಲಿಟ್ಟಿರುವ (ಯೋಹಾನ 14:31) ಪ್ರೀತಿಯ ಪ್ರಕಾರ – ಬೆಳೆಸಿಕೊಳ್ಳತಕ್ಕದ್ದು. ಯೇಸುವು ತನ್ನ ತಾತ್ಕಾಲಿಕವಾದ ಭೂಲೋಕದ ತಂದೆತಾಯಿಗಳಿಗೆ ತನ್ನನ್ನು ಅಧೀನಪಡಿಸಿಕೊಂಡ ಪ್ರಕಾರವಾಗಿಯೇ, ಮಕ್ಕಳು ತಮ್ಮ ತಂದೆಗಳ ಚಿತ್ತಕ್ಕೆ ಸ್ಪಂದಿಸುವವರಾಗಿರಬೇಕು (ಲೂಕ 2:51).

ಪ್ರೀತಿಯು ಕುಟುಂಬದಲ್ಲಿ ಹೇಗೆ ತೋರಿಸಲ್ಪಡಬೇಕೆಂಬುದಕ್ಕೆ ಮಾರ್ಗಸೂಚಿಗಳನ್ನು 1 ಕೊರಿಂಥ 13:4-8ರಲ್ಲಿ ಕಾಣಬಹುದಾಗಿದೆ. ಒಂದು ಕುಟುಂಬಕ್ಕೆ ಉತ್ತಮವಾದ ಉಪಾಯವೆಂದರೆ ಈ ವಚನಗಳನ್ನು ಬರೆದ ಫಲಕಗಳನ್ನು ಮನೆಯಲ್ಲಿ ಹಾಕಿಕೊಳ್ಳಬೇಕು. ಕುಟುಂಬದ ಸದಸ್ಯರು ಒಬ್ಬರಿಗೊಬ್ಬರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಜ್ಞಾಪಿಸುವಂತಾಗಲು ಅವರು ಸತತವಾಗಿ ಅದನ್ನು ಓದುತ್ತಲಿರಬೇಕು.

ನಾವು ನಮ್ಮಿಂದ ನಿರೀಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವೆವು ಮತ್ತು ನಮ್ಮ ಪಾತ್ರಕ್ಕೆ ಸಮರ್ಪಕವಾಗಿ ಪ್ರತಿಕ್ರಿಯಿಸುವವರಾಗುವಂತೆ ದೇವರು ನಮಗೆ ವಹಿಸಿರುವ ಪಾತ್ರವನ್ನು ನಮ್ಮಲ್ಲಿ ಪ್ರತಿಯೊಬ್ಬರು ಸಹ ಅರ್ಥಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು. ನಾವು ಯಾವದನ್ನು ಮಾಡುವದು ನಮ್ಮ ಜವಾಬ್ದಾರಿಯಲ್ಲವೋ ಅದನ್ನು ಮಾಡಲು ಪ್ರಯತ್ನಿಸುವಾಗ ಕೆಟ್ಟ ಪರಿಸ್ಥಿತಿಗಳು ಉದ್ಭವವಾಗುತ್ತವೆ.

*ಕುಟುಂಬದಲ್ಲಿ ಗಂಡನು ತಲೆಯಾಗಿರಬೇಕೆಂದು ದೇವರ ಬಯಕೆಯಾಗಿದೆ* (ಎಫೆಸ 5:23). ಕುಟುಂಬದ ಘಟಕದಲ್ಲಿ ಆತನು ನಾಯಕನಾಗಿರಬೇಕು. ಪಾತ್ರಗಳು ಅದಲುಬದಲಾದಾಗ ಸಮಸ್ಯೆಗಳು ಉಂಟಾಗುತ್ತವೆ.

ಹಳೆಯ ಒಡಂಬಡಿಕೆಯ ಕಾಲದಲ್ಲಿ ಸಾರಳಂತಹ ಭಕ್ತೆಯರಾದ ಹೆಂಡತಿಯರು ಮಾಡಿದ ರೀತಿಯಲ್ಲಿಯೇ, *ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರುವ ಮೂಲಕ ತಮ್ಮನ್ನು ಅಲಂಕರಿಸಿಕೊಳ್ಳಬೇಕು.*

> ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆಯಿಟ್ಟ ಭಕ್ತೆಯರಾದ ಸ್ತ್ರೀಯರು ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡರು. ಅವರು ತಮ್ಮ ಗಂಡಂದಿರಿಗೆ ಅಧೀನರಾಗಿದ್ದು ಯಾವ ಭೀತಿಗೂ ಗಾಬರಿಪಡದೆ ಒಳ್ಳೇದನ್ನೇ ಮಾಡುವವರಾಗಿದ್ದರು. ಸಾರಳು ಹಾಗೆಯೇ ಅಬ್ರಹಾಮನಿಗೆ ವಿಧೇಯಳಾಗಿದ್ದು ಅವನನ್ನು ಯಜಮಾನ ಎಂದು ಕರೆದಳು (1 ಪೇತ್ರ 3:5, 6).

ಒಬ್ಬ ಭಕ್ತೆಯಾದ ಹೆಂಡತಿಯ ವರ್ಣನೆಯು ಜ್ಞಾನೋಕ್ತಿ 31:10-31ರಲ್ಲಿ ಸಿಕ್ಕುತ್ತದೆ. ಈ ವಾಕ್ಯಭಾಗವು ಆಕೆಯು ತನ್ನ ಗಂಡ ಮತ್ತು ಮಕ್ಕಳ ಆರೈಕೆಯನ್ನು ಸೇರಿದಂತೆ, ಪಡುವ ಪ್ರಯಾಸಗಳನ್ನೆಲ್ಲಾ ವರ್ಣಿಸುತ್ತದೆ.

*ತಂದೆತಾಯಿಗಳು ತಮ್ಮ ಮಕ್ಕಳಿಗೆ ಉತ್ತಮ ಉದಾಹರಣೆಗಳಾಗಿರಬೇಕು.* ಬೈಬಲ್ ನಮಗೆ ಕೆಟ್ಟ ಮತ್ತು ಒಳ್ಳೆಯ ಎರಡೂ ರೀತಿಯ ತಂದೆತಾಯಿಗಳ ಉದಾಹರಣೆಗಳನ್ನು ನೀಡುತ್ತದೆ. ಅಬ್ರಹಾಮನು ಒಬ್ಬ ಒಳ್ಳೇ ತಂದೆಗೆ ಉದಾಹರಣೆಯಾಗಿದ್ದಾನೆ. ತಾನು ಅಬ್ರಹಾಮನ ಮಕ್ಕಳನ್ನು ಆಶೀರ್ವದಿಸುವದಕ್ಕೆ ಶಕ್ತನಾಗುವಂತೆ ಆತನು ಅವರನ್ನು ಕರ್ತನ ದಾರಿಯಲ್ಲಿ ನಡಿಸುವನೆಂದು ದೇವರಿಗೆ ಗೊತ್ತಿತ್ತು (ಆದಿಕಾಂಡ 18:19).

*ಮಕ್ಕಳು ತಮ್ಮ ತಂದೆತಾಯಿಗಳನ್ನು ಸನ್ಮಾನಿಸತಕ್ಕದ್ದು ಮತ್ತು ವಿಧೇಯರಾಗತಕ್ಕದ್ದು* (ಎಫೆಸ 6:1-3). ಇದು ದೇವರ ಯೋಜನೆಯಾಗಿದೆ. ಅಬ್ಷಾಲೋಮನು ತನ್ನ ತಂದೆಯನ್ನು ಸನ್ಮಾನಿಸಿದ್ದರೆ ಮತ್ತು ಆತನ ವಿರುದ್ಧ ಬಂಡಾಯವೇಳಲಿಲ್ಲವಾಗಿದ್ದರೆ ಇಸ್ರಾಯೇಲ್ ರಾಜ್ಯದಲ್ಲಿ ಹಾಗೂ ದಾವೀದನ ಕುಟುಂಬದಲ್ಲಿ ಎಲ್ಲವೂ ಸರಿಯಾಗಿಯೇ ಸಂಭವಿಸಿರುತ್ತಿತ್ತು. ತನ್ನ ಮಗನ ಬಂಡಾಯದ ಕಾರಣದಿಂದಾಗಿ, ದಾವೀದನು ತನ್ನ ಪ್ರಾಣವನ್ನು ಕಾಪಾಡಿಕೊಳ್ಳುವದಕ್ಕೆ ಓಡಿ ಹೋದನು; ಆದರೆ ಯುದ್ಧವು ಉಂಟಾದಾಗ, ಅಬ್ಷಾಲೋಮನ ಸೈನ್ಯವು ಸೋಲಿಸಲ್ಪಟ್ಟು ಆತನು ಕೊಲ್ಲಲ್ಪಟ್ಟನು. ದಾವೀದನು, ಒಬ್ಬ ಹೃದಯ ಒಡೆಯಲ್ಪಟ್ಟ ತಂದೆಯಾಗಿ, "ನನ್ನ ಮಗನೇ, ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು" (2 ಸಮುವೇಲ 18:33).

ಕುಟುಂಬದಲ್ಲಿನ ಪಾತ್ರಗಳ ಬಗ್ಗೆ ದೇವರು ನೇಮಿಸಿರುವ ಯೋಜನೆಯನ್ನು ಅನುಸರಿಸದಿದ್ದಾಗ ಕುಟುಂಬ ಸಮಸ್ಯೆಗಳು ಉದ್ಭವವಾದವು. ದೇವರು ಕುಟುಂಬಕ್ಕಾಗಿ ಹೊಂದಿರುವ ಯೋಜನೆಯನ್ನು ನಾವು ಉತ್ತಮಗೊಳಿಸಲು ಸಾಧ್ಯವಿಲ್ಲ.

## ನಾಗರಿಕ ಸಂಬಂಧಗಳು

ನಾಗರಿಕ ಸಂಬಂಧಗಳಲ್ಲಿರುವ ಜನರ ನಡುವೆ ಗೌರವಪೂರ್ವಕವಾದ

ವರ್ತನೆಯಿರಬೇಕೆಂದು ದೇವರು ಅಪೇಕ್ಷಿಸುತ್ತಾನೆ. ನಾವು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಬರೆಯಲಾಗಿರುವ ಯಜಮಾನ-ದಾಸನ ಸಂಬಂಧದಿಂದ ಕಲಿತುಕೊಳ್ಳಬಹುದು ಮತ್ತು ಅದನ್ನು ಉದ್ಯೋಗಿಗಳು ಹಾಗೂ ಧಣಿಗಳ ನಡುವಿನ ವರ್ತನೆಯಲ್ಲಿ ಅಥವಾ ಅದರಂತಹ ಬೇರೆ ಪರಿಸ್ಥಿತಿಗಳಲ್ಲಿ ಅನ್ವಯಪಡಿಸಿಕೊಳ್ಳಬಹುದು.

ಯಜಮಾನರನ್ನು ಮೆಚ್ಚಿಸಬೇಕೆಂಬ ಒಂದು ಪ್ರಯತ್ನವನ್ನು ಮಾಡುವವರಾಗಿ *ದಾಸರು ತಮ್ಮ ಯಜಮಾನರಿಗೆ* ಮನಃಪೂರ್ವಕವಾಗಿ *ವಿಧೇಯರಾಗತಕ್ಕದ್ದು*. ಅವರು ಕರ್ತನಿಗೆ ಭಯಪಡುವವರಾಗಿ ಸೇವೆ ಮಾಡಬೇಕು. ತಮ್ಮ ಯಜಮಾನನು ಕೊಡುವದಕ್ಕಿಂತಲು ಉತ್ತಮವಾದ ಪ್ರತಿಫಲವನ್ನು ದೇವರು ಕೊಡುವನೆಂಬುದನ್ನು ಗ್ರಹಿಸಿಕೊಂಡವರಾಗಿ, ಅವರು ಕರ್ತನಿಗೋಸ್ಕರ ಕೆಲಸ ಮಾಡುತ್ತಿದ್ದಾರೇನೋ ಎಂಬಂತೆ ದುಡಿಯತಕ್ಕದ್ದು.

ಎಲೀಷನ ದಾಸನಾದ ಗೇಹಜಿಯು ಪ್ರವಾದಿಯ ಬಯಕೆಗಳನ್ನು ನೆರವೇರಿಸುವವನಾಗಿದ್ದನು, ಆದರೆ ಒಂದು ದಿನ ಆತನು ತನ್ನ ಬಯಕೆಯಂತೆ ನಡೆಯಲು ನಿರ್ಧರಿಸಿದನು. ನಾಮಾನನ ಕುಷ್ಠರೋಗವನ್ನು ದೇವರು ಗುಣಪಡಿಸಿದ ಬಳಿಕ ಆತನು ಎಲೀಷನಿಗೆ ಕಾಣಿಕೆಯನ್ನು ಸ್ವೀಕರಿಸಿಕೊಳ್ಳುವಂತೆ ಒತ್ತಾಯ ಪಡಿಸುವ ವೇಳೆ ಗೇಹಜಿಯು ಅಲ್ಲಿದ್ದನು.

ಎಲೀಷನು, “ನಾನು ಸನ್ನಿಧಿ ಸೇವೆಮಾಡುತ್ತಿರುವ ಯೆಹೋವನಾಣೆ, ನಿನ್ನಿಂದ ಏನೂ ತೆಗೆದುಕೊಳ್ಳುವದಿಲ್ಲ” ಎಂದು ಹೇಳಿದ್ದನ್ನು ಗೇಹಜಿಯು ಕೇಳಿಸಿಕೊಂಡಿದ್ದನು (2 ಅರಸು 5:16). ತಾನು ಎಲೀಷನ ಬಯಕೆಗೆ ವಿರುದ್ಧವಾಗಿ ನಡೆದವನಾಗುವೆನೆಂದು ಆತನು ಗ್ರಹಿಸಿಕೊಂಡಿರಬೇಕು, ಆದರೆ ಆತನು ನಾಮಾನನನ್ನು ಹಿಂಬಾಲಿಸಿ ಹೋಗಿ ಆತನು ತನಗೆ ಕಾಣಿಕೆಗಳನ್ನು ಕೊಡುವ ಹಾಗೆ ಅವನಿಗೆ ಸುಳ್ಳು ಹೇಳಿದನು. ಆತನ ದುರಾಶೆ ಮತ್ತು ಅವಿಧೇಯತೆಯ ಕಾರಣದಿಂದ ನಾಮಾನನಿಗಿದ್ದ ಕುಷ್ಠರೋಗವು ಆತನಿಗೆ ಕೊಡಲ್ಪಟ್ಟಿತು (2 ಅರಸು 5:27). ಯಜಮಾನರು ದೇವರ ಚಿತ್ತವನ್ನು ಉಲ್ಲಂಘಿಸದೆ ಇರುವ ವರೆಗೆ ದಾಸರು ಅವರಿಗೆ ವಿಧೇಯರಾಗಬೇಕೆಂದು ದೇವರು ಅಪೇಕ್ಷಿಸುತ್ತಾನೆ (ಅಪೊಸ್ತಲರ ಕೃತ್ಯಗಳು 5:29).

ದಾಸರಿಗೆ ಕೊಡಲ್ಪಟ್ಟಿರುವ ಬೋಧನೆಗಳು ಬಹುಶಃ ಉದ್ಯೋಗಿಗಳಿಗೂ ಅನ್ವಯವಾಗುತ್ತವೆ. ನಾವು ಒಂದು ದಿನದ ಸಂಬಳಕ್ಕಾಗಿ ಒಂದು ದಿನದ ಉತ್ತಮ ಕೆಲಸವನ್ನು ಒದಗಿಸತಕ್ಕದ್ದು. ಯೇಸುವುಗೆ ಗೌರವ ಸಿಕ್ಕುವಂತೆ ಮತ್ತು ಆತನ ಹೆಸರಿಗೆ ದೂಷಣೆಯನ್ನು ತರುವವರಾಗಿರದ ಹಾಗೆ ನಾವು ಕೆಲಸವನ್ನು ಮಾಡತಕ್ಕದ್ದು.

ಒಬ್ಬ ಹೈಸ್ಕೂಲ್ ವಿದ್ಯಾರ್ಥಿಯು ವ್ಯಾಪಾರ ಮಳಿಗೆಯೊಂದರಲ್ಲಿ ಕೆಲಸವನ್ನು ಆರಂಭಿಸಿದ್ದನು, ಅಲ್ಲಿ ಹಿರಿಯ ಪುರುಷರನ್ನೊಳಗೊಂಡಿದ್ದ ಒಂದು ಗುಂಪು ಆತನಿಗೆ ಅಷ್ಟೊಂದು ಕಠಿಣವಾಗಿ ಪರಿಶ್ರಮ ಪಡಬೇಡ ಎಂದು ಸಲಹೆ ಮಾಡುತ್ತಿದ್ದರು. ಧಣಿಯು ಇರುವಾಗಷ್ಟೆ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದರು. ತಾನು ಇಷ್ಟೊಂದು ಕಷ್ಟಪಟ್ಟು ಕೆಲಸ ಮಾಡಿದರೆ ಅವರು ಅಷ್ಟೇನೂ ಕೆಲಸವನ್ನೇ ಮಾಡುವದಿಲ್ಲವಲ್ಲಾ ಎಂದು ವಿದ್ಯಾರ್ಥಿಯು ಬೇಸರಗೊಂಡನು. ಒಂದು ದಿನ ಊಟದ ಬಿಡುವಿನ ಸಮಯದಲ್ಲಿ, ಆತನು ಕೊಲೊಸ್ಸೆ 3:23ರನ್ನು ಓದಿದನು, ಅದು ಆತನನ್ನು ಮನುಷ್ಯರಿಗೋಸ್ಕರವಲ್ಲದೆ ಯೇಸುವಿಗೋಸ್ಕರ ದುಡಿಯಬೇಕೆಂದು ನಿರ್ಣಯಿಸಿಕೊಳ್ಳುವಂತೆ ಮಾಡಿತು. ಧಣಿಯು ತನಗೋಸ್ಕರ ಒಬ್ಬ

ಸಹಾಯಕನನ್ನು ಆರಿಸಿಕೊಳ್ಳುವ ಸಮಯ ಬಂದಾಗ, ಆತನು ಹಿರಿಯ ವ್ಯಕ್ತಿಗಳನ್ನೆಲ್ಲಾ ಬಿಟ್ಟು ಈ ವಿದ್ಯಾರ್ಥಿಯನ್ನು ತನ್ನ ಸಹಾಯಕನ್ನಾಗಿ ನೇಮಿಸಿಕೊಂಡನು.

ಪಟ್ಟಣವೊಂದರಲ್ಲಿ ನಡೆದ ಸುವಾರ್ತೆಯ ಕೂಟದಲ್ಲಿ ಒಬ್ಬ ಸುವಾರ್ತಾ ಸೇವಕನಿಗೆ ಒಬ್ಬ ವ್ಯಕ್ತಿಯು ಮಾತ್ರವೇ ಪ್ರತಿಕ್ರಿಯೆಯನ್ನು ತೋರಿದನು. ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಮುಂದೆ ಬಂದ ಸ್ತ್ರೀಯ ಬಗ್ಗೆ ಆತನು ಪ್ರಭಾವಿತಗೊಂಡನು, ಯಾಕೆಂದರೆ ಆಕೆಯು ಸಮುದಾಯದಲ್ಲಿ ಪ್ರಮುಖ ಸ್ತ್ರೀಯಾಗಿದ್ದಳು. ಆಕೆಯನ್ನು ಸ್ಪರ್ಶಿಸಿದ ಯಾವ ಮಾತನ್ನು ತಾನು ಆಡಿದೆನು ಎಂಬದನ್ನು ತಿಳಿದುಕೊಂಡು ಅದನ್ನು ಮುಂದಿನ ಕೂಟದಲ್ಲಿ ಬಳಸಬಹುದೆಂಬ ಇಚ್ಛೆಯಿಂದ ಆತನು ಆಕೆಯನ್ನು ಹೀಗೆ ಕೇಳಿದನು, "ನಿನಗೆ ಅಭ್ಯಂತರವಿಲ್ಲವೆಂದರೆ ನೀನು ಸುವಾರ್ತೆಗೆ ವಿಧೇಯವಾಗುವಂತೆ ಕಾರಣವಾದ ಯಾವ ಕಾರ್ಯವನ್ನು ನಾನು ಹೇಳಿದೆ ಅಥವಾ ಮಾಡಿದೆ ಎಂಬದನ್ನು ಹೇಳುವಿಯಾ?" ಅದಕ್ಕೆ ಆ ಸ್ತ್ರೀಯು ಉತ್ತರವಾಗಿ, "ಅದಕ್ಕೆ ಕಾರಣ ನೀನು ಹೇಳಿದ ಅಥವಾ ಮಾಡಿದ ಯಾವದೇ ಕಾರ್ಯವಲ್ಲ. ಕೂಟದಲ್ಲಿ ನನ್ನ ಪಕ್ಕದಲ್ಲಿ ಕುಳಿತ ಸ್ತ್ರೀಯು ನಿಮಗೆ ನೆನಪಿದೆಯಾ? ಆಕೆಯು ನನ್ನ ಮನೆಯ ಕೆಲಸದಾಕೆ. ಆಕೆಯ ಕೆಲಸವನ್ನು ಮತ್ತು ಜೀವಿತವನ್ನು ನೋಡಿ ನಾನು ಬಹಳ ಪ್ರಭಾವಿತಳಾಗಿ ಆಕೆಯ ಧರ್ಮ ಯಾವದೆಂದು ಆಕೆಯನ್ನು ಕೇಳಿದೆನು. ಆಕೆಯು ತಾನು ಯೇಸುವನ್ನು ನಂಬುತ್ತೇನೆ ಮತ್ತು ಆತನ ಸಭೆಯ ಸದಸ್ಯಳೆಂದು ನಮ್ರತೆಯಿಂದ ಹೇಳಿದಳು. ನಾನು ಕ್ರೈಸ್ತಳು ಮತ್ತು ಕ್ರಿಸ್ತನ ಸಭೆಯ ಸದಸ್ಯಳು ಆಗಬೇಕೆಂದು ಬಯಸಿದ್ದಕ್ಕೆ ಕಾರಣ ಆಕೆಯೇ ಆಗಿದ್ದಾಳೆ" ಎಂದು ಹೇಳಿದಳು.

*ಯಜಮಾನರು ತಮ್ಮ ಪರಲೋಕದ ಯಜಮಾನನಾದ ಯೇಸುವನ್ನು ಸನ್ಮಾನಿಸತಕ್ಕದ್ದು.* ಅವರು ತಮ್ಮ ದಾಸರ ವಿಷಯದಲ್ಲಿ ನ್ಯಾಯವಾಗಿ ನಡೆದುಕೊಳ್ಳಬೇಕು. ಈ ಬೋಧನೆಯು ಉದ್ಯೋಗಿಗಳನ್ನು ಹೊಂದಿರುವ ಧಣಿಗಳಾಗಿ ಸಭೆಯ ಸದಸ್ಯರಾಗಿರುವವರಿಗೆ ಸಹ ಅನ್ವಯವಾಗುತ್ತದೆ. ಧಣಿಗಳು ತಮ್ಮ ಕೆಲಸಗಾರರ ಬಗ್ಗೆ ದಾಕ್ಷಿಣ್ಯಪರರಾಗಿರಬೇಕು. ಉದ್ಯೋಗಿಗಳಿಗೆ ನ್ಯಾಯವಾದಂಥ ಸಂಬಳಗಳನ್ನು ಕೊಡತಕ್ಕದ್ದು ಮತ್ತು ತಮಗೆ ಜನರು ಏನೇನು ಮಾಡಬೇಕೆಂದು ಧಣಿಗಳು ಬಯಸುತ್ತಾರೋ ಅದನ್ನೇ ತಾವು ಉದ್ಯೋಗಿಗಳಿಗೂ ಮಾಡಬೇಕು (ಮತ್ತಾಯ 7:12).

## ಸರಿಯಾದ ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದು

ನಮ್ಮ ಮೊದಲ ಜವಾಬ್ದಾರಿಯು ದೇವರ ಸಂಗಡದ ಸಂಬಂಧ ಮತ್ತು ಎರಡನೆಯದು ಬೇರೆಯವರೊಂದಿಗಿನ ಸಂಬಂಧವಾಗಿದೆ. ಪ್ರತಿಯೊಂದು ಸಂಬಂಧವು ಪ್ರೀತಿಯ ಮೇಲೆ ಆಧಾರವಾಗಿರಬೇಕು, ಅದರಲ್ಲಿ ದೇವರ ಮೇಲೆ ಪ್ರೀತಿ, ಜೊತೆ ಕ್ರೈಸ್ತರು, ನೆರೆಯವರು, ಮತ್ತು ವೈರಿಗಳ ಮೇಲೆ ಪ್ರೀತಿ ಹೊಂದಿರುವದು ಸೇರಿರುತ್ತದೆ. ನಮ್ಮ ಸಂಬಂಧಗಳೆಲ್ಲಾ ಪ್ರೀತಿಯ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟವುಗಳಾಗಿದ್ದಲ್ಲಿ, ಪರಸ್ಪರರಿಗೆ ಸಂಬಂಧಿಸಿದ ನಮ್ಮ ಅನೇಕ ಸಮಸ್ಯೆಗಳು ಪರಿಹರಿಸಲ್ಪಡುತ್ತಿದ್ದವು.

ಕ್ರೈಸ್ತರು ಬೇರೆಯವರೊಂದಿಗಿನ ತಮ್ಮ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಗೌರವಿಸಬೇಕು ಹಾಗೂ ಆ ಸಂಬಂಧಗಳಲ್ಲಿ ತಮಗಿರುವ ಹೊಣೆಗಳನ್ನು ನೆರವೇರಿಸಬೇಕು. ಕ್ರಿಸ್ತನ ದೇಹದ ಸದಸ್ಯರು ಪರಸ್ಪರರ ಕಡೆಗೆ ಜವಾಬ್ದಾರಿಗಳನ್ನು ಹೊಂದಿದ್ದಾರೆ. ಪ್ರತಿಯೊಬ್ಬ ಕ್ರೈಸ್ತನಿಗೂ ಸಭೆಯಲ್ಲಿ ನೆರವೇರಿಸಬೇಕಾದ ಪಾತ್ರವೊಂದು

ಇರುತ್ತದೆ.

*ಗಂಡಂದಿರು ಮತ್ತು ಹೆಂಡತಿಯರು* (3:18, 19). ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರಬೇಕು – ಆತನು ತನ್ನ ಶಕ್ತಿಯಿಂದ ಆಕೆಯನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತನೆಂಬ ಕಾರಣಕ್ಕಾಗಿ ಅಲ್ಲ, ಆದರೆ ಕರ್ತನ ಚಿತ್ತಕ್ಕನುಗುಣವಾಗಿ ತನ್ನನ್ನು ಆತನಿಗೆ ಅಧೀನಪಡಿಸಿಕೊಳ್ಳಲು ಮನಸ್ಸುಳ್ಳವಳಾಗಿದ್ದಾಳೆಂಬ ಕಾರಣಕ್ಕಾಗಿಯೇ ಆಗಿದೆ. ಹೆಂಡತಿಯು ಭಾವನಾತ್ಮಕವಾಗಿ ದುರುಪಯೋಗಪಡಿಸಿಕೊಳ್ಳುವ ಮೂಲಕ ತನ್ನ ಗಂಡನ ಮೇಲೆ ಅಧಿಕಾರ ಚಲಾಯಿಸಬಾರದು, ಅದು ದೈಹಿಕ ಶೋಷಣೆಯಷ್ಟೇ ವಿನಾಶಕರವಾಗಿರಬಲ್ಲದು. ಸಾಮಾನ್ಯವಾಗಿ ಹೇಳುವದಾದರೆ, ಸ್ತ್ರೀಯರು ತನ್ನ ಸೌಂದರ್ಯದಿಂದ ಪುರುಷನಿಗೆ ಆಕರ್ಷಣೆಯಾಗಿರುತ್ತಾರೆ, ಮತ್ತು ಸ್ತ್ರೀಯರನ್ನು ಕಾಪಾಡುವ ಹಾಗೂ ಪೋಷಣೆ ಮಾಡುವ ತಮ್ಮ ಸಾಮರ್ಥ್ಯಗಳಿಂದಾಗಿ ಸ್ತ್ರೀಯರಿಗೆ ಪುರುಷರು ಆಕರ್ಷಣೆಯಾಗುತ್ತಾರೆ. ಈ ಗುಣಲಕ್ಷಣಗಳನ್ನು ಒಬ್ಬರಿಗೊಬ್ಬರ ವಿರುದ್ಧವಾಗಿ ತಿರುಗಿಸಲ್ಪಡಕೂಡದು.

ಗಂಡಂದಿರುವ ತಮ್ಮ ಹೆಂಡತಿಯರನ್ನು ಹೆದರಿಸಿ ಅಥವಾ ಒತ್ತಾಯಿಸಿ ತಮಗೆ ಅಧೀನಪಡಿಸಿಕೊಳ್ಳಬಾರದು. ಬದಲಾಗಿ, ಅವರು ಗಾಢವಾದ ಪ್ರೀತಿಯುಳ್ಳವರಾಗಿ ಅವರಿಗಾಗಿ ಕಾಳಜಿಯನ್ನು ತೋರಿಸತಕ್ಕದ್ದು (ಎಫೆಸ 5:25). ಇಬ್ಬರು ಅಥವಾ ಮೂವರು ಜನರನ್ನೊಳಗೊಂಡ ಪ್ರತಿಯೊಂದು ಸಂಬಂಧದಲ್ಲಿಯೂ, ಯಾರಾದರೊಬ್ಬರು ಮುಂದಾಳತ್ವವನ್ನು ವಹಿಸಿಕೊಳ್ಳಬೇಕು; ಏಕಕಾಲದಲ್ಲಿ ಇಬ್ಬರು ನಾಯಕನಾಗಿ ಕೆಲಸ ಮಾಡುವದಕ್ಕೆ ಸಾಧ್ಯವಿಲ್ಲ. ದೇವರು ಮಾಡಿರುವ ವ್ಯವಸ್ಥೆಯು ಯಾವಾಗಲೂ ಉತ್ತಮವಾದ ಕಾರ್ಯ ಮಾಡುವದಾಗಿರುತ್ತದೆ.

*ತಂದೆತಾಯಿಗಳು ಮತ್ತು ಮಕ್ಕಳು* (3:20, 21). ಮಕ್ಕಳು ತಮ್ಮ ಮೇಲೆ ಅಧಿಕಾರದಲ್ಲಿರುವವರಿಗೆ, ವಿಶೇಷವಾಗಿ ತಮ್ಮ ತಂದೆತಾಯಿಗಳ ಅಧಿಕಾರಕ್ಕೆ ಅಗೌರವವನ್ನು ತೋರುವಾಗ ಸಮಾಜವು ಛಿದ್ರಗೊಳ್ಳುತ್ತದೆ. ವಿಧೇಯತೆಯನ್ನು ಕಲಿತುಕೊಂಡಿರುವಂಥ ಮಕ್ಕಳ ಮೇಲೆಯೇ ಸಭೆಯ ಭವಿಷ್ಯವು ಆಧಾರವಾಗಿರುತ್ತದೆ. ಈ ಕಾರಣದಿಂದಲೇ ಹಿರಿಯರು ಮಕ್ಕಳನ್ನು ಗೌರವವುಳ್ಳವರನ್ನಾಗಿಯೂ ಅಧೀನದಲ್ಲಿರುವವರನ್ನಾಗಿಯೂ ಇಟ್ಟುಕೊಂಡಿರಬೇಕು (2 ತಿಮೊಥೆ 3:4, 5).

ತಂದೆಗಳು ಚಿಕ್ಕ ಮಕ್ಕಳ ದೃಷ್ಟಿಗೆ ಬೃಹತ್, ಸ್ವಾಧೀನಪಡಿಸಿಕೊಳ್ಳುವ ನಿರಂಕುಶವಾದಿಗಳಂತೆ ಕಾಣಿಸಬಹುದಾಗಿದೆ. ಅವರ ಕ್ರೋಧ ಹಾಗೂ ಅಸಮ್ಮತಿ ತೋರಿಸುವಿಕೆಯು ಭಯ ಹುಟ್ಟಿಸುವ ರೀತಿಯಲ್ಲಿರಬಹುದು. ಒರಟು ಕೈಗಳುಳ್ಳ, ದಬ್ಬಾಳಿಕೆ, ಅಥವಾ ದರ್ಪದ ತಂದೆಗಳು ಮಕ್ಕಳಲ್ಲಿ ತಾವು ಅಮುಖ್ಯರು ಮತ್ತು ಕಡಿಮೆಯಾದವರು ಎಂಬ ಭಾವವನ್ನುಂಟು ಮಾಡುವರು. ಇದನ್ನು ಸಂಭವಿಸುವದಕ್ಕೆ ಬಿಡುವದರ ಬದಲಾಗಿ, ತಮ್ಮ ಮಕ್ಕಳಲ್ಲಿ ತಂದೆಗಳು ದೃಢವಿಶ್ವಾಸ ಮತ್ತು ಧೈರ್ಯವನ್ನು ತುಂಬಿಸಬೇಕು. ಕೆಲವು ಸಾರಿ ಚಿಕ್ಕ ಮಕ್ಕಳು ತಮ್ಮ ತಂದೆಯರು ಏನು ಬೇಕಾದರೂ ಮಾಡಬಲ್ಲರು ಎಂಬ ನಂಬಿಕೆಯನ್ನು ಬೆಳೆಸಿಕೊಂಡಿರುತ್ತಾರೆ. ಅವರು ಸಹ ಸಾರ್ಥಕವಾದ ಗುರಿಗಳನ್ನು ಸಾಧಿಸಲು ಶಕ್ತರಾಗಿರುತ್ತಾರೆ ಎಂದು ವಿಶ್ವಾಸಿಸಿಕೊಳ್ಳುವ ಹಾಗೆ ತಂದೆಯಂದಿರು ಮಕ್ಕಳಿಗೆ ಸಹಾಯ ಮಾಡಬೇಕು.

*ಯಜಮಾನರು ಮತ್ತು ದಾಸರು* (3:22-4:1). ಕ್ರಿಸ್ತನಲ್ಲಿ ವ್ಯಕ್ತಿಗಳೊಳಗೆ ಭೇದಗಳಿರಬಾರದು, ಯಾಕೆಂದರೆ ಎಲ್ಲರು ಆತ್ಮಿಕವಾಗಿ ಸಮಾನರಾಗಿದ್ದಾರೆ (ಗಲಾತ್ಯ 3:28). ಪರಿವರ್ತನೆಗೊಂಡಿದ್ದ ದಾಸರು ಕ್ರಿಸ್ತನಲ್ಲಿ ಸ್ವತಂತ್ರರಾದರು. ಅವರು ಆತ್ಮೀಕವಾಗಿ ತಮ್ಮ ಯಜಮಾನರೊಂದಿಗೆ ಸಮಾನತೆಯಲ್ಲಿದ್ದರಾದರೂ, ಅವರಿಗೆ ಆಗಲೂ ತಮ್ಮ ಯಜಮಾನರ ಹಂಗಿನಲ್ಲಿದ್ದರು. ಅವರು ಇನ್ನು ಹೆಚ್ಚಾದ ಹುರುಪಿನಿಂದ ಸೇವೆಯನ್ನು ಮುಂದುವರೆಸಬೇಕೆಂಬುದು ಕರ್ತನ ಅಪೇಕ್ಷೆಯಾಗಿತ್ತು. ಅವರ ಸೇವೆಯು ಯೇಸುವಿಗಾಗಿ ಕೆಲಸ ಮಾಡುತ್ತಿದ್ದರೆ ಹೇಗಿರುತ್ತದೋ ಹಾಗೆಯೇ ಇರಬೇಕಿತ್ತು. ಒಬ್ಬ ಉದ್ಯೋಗಿಯು, ಯೇಸುವೇ ಶ್ರೇಷ್ಠವಾದ ಹಾಗೂ ಅಂತಿಮ ಪ್ರತಿಫಲವನ್ನು ಕೊಡುವಾತನು ಎಂಬುದನ್ನು ತಿಳಿದವನಾಗಿ ತನ್ನ ಧಣಿಗೆ ಈ ರೀತಿಯಾದ ಸೇವೆಯನ್ನು ನೀಡಬೇಕು. ನಮ್ಮಲ್ಲಿ ಪ್ರತಿಯೊಬ್ಬರು ಸಹ ಮಾನವ ದೇಹದಲ್ಲಿರುವ ವೇಳೆ ಮಾಡಿರುವ ಸಕಲ ಕಾರ್ಯಗಳಿಗಾಗಿಯೂ ಯೇಸುವಿನ ಮುಂದೆ ಲೆಕ್ಕವನ್ನು ಕೊಡಬೇಕು (2 ಕೊರಿಂಥ 5:10).

ಯಜಮಾನರು ತಮ್ಮ ದಾಸರಿಗೆ ಗೌರವವನ್ನು ಕೊಟ್ಟು ಅವರ ವಿಷಯದಲ್ಲಿ ನ್ಯಾಯವಾಗಿ ನಡೆದುಕೊಳ್ಳಬೇಕು, ಯಾಕೆಂದರೆ ಸ್ವತಃ ಅವರಿಗೇ ತಾನಿರುವಂಥ ವಿಧದ ಯಜಮಾನರಾಗಿಯೇ ಅವರು ಇರಬೇಕೆಂದು ಎದುರುನೋಡುವ ಒಬ್ಬ ಯಜಮಾನನು ಇದ್ದಾನೆ ಎಂಬದಾಗಿ ಹೇಳಲ್ಪಟ್ಟಿತು. ಕ್ರಿಸ್ತನ ಮನೋಭಾವವನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಒಬ್ಬ ಯಜಮಾನನು ತನ್ನ ದಾಸರನ್ನು ಪ್ರೀತಿಸುವವನಾಗಿ ಬೆಳೆಯುವನು ಮತ್ತು ಬಹುಶಃ ಅವರನ್ನು ಸ್ವತಂತ್ರಗೊಳಿಸುವನು. ಕೆಲವು ದಾಸರು ತಮ್ಮ ಉದಾತ್ತರಾಗಿದ್ದ ಯಜಮಾನರನ್ನು ಎಷ್ಟೊಂದು ಅನುರಾಗ ಹೊಂದಿದ್ದರೆಂದರೆ, ಸ್ವಾತಂತ್ರ್ಯವನ್ನು ಕೊಟ್ಟಾಗ್ಯೂ ಅವರನ್ನು ಬಿಟ್ಟು ಹೋಗಲು ನಿರಾಕರಿಸಿದರು. ಅಧಿಕಾರ ಸ್ಥಾನದಲ್ಲಿರುವ ಯಾವನೇ ಆಗಲಿ ತನ್ನ ಕೈಕೆಳಗಿನವರ ಜೊತೆ ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಉದಾಹರಣೆಯಾಗಿ ಯೇಸುವನ್ನೇ ದೃಷ್ಟಿಸತಕ್ಕದ್ದು.

---

## ಅಡಿಟಿಪ್ಪಣಿಗಳು

[1]ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯ ಈ ವಿಭಾಗದಲ್ಲಿ ಅತಿವ್ಯಾಪನೆ ವರ್ಗಗಳಲ್ಲಿರುವ ಜನರನ್ನೊಳಗೊಂಡಿರಬಹುದಾಗಿದೆ. David M. Hay ಹೀಗೆ ಅಭಿಪ್ರಾಯವನ್ನು ತಿಳಿಸುತ್ತಾನೆ, "ಸ್ತ್ರೀಯರು ಏಕಕಾಲದಲ್ಲಿ ಹೆಂಡತಿಯರು, ಹೆತ್ತವರು, [ಪುತ್ರಿಯರು,] ಮತ್ತು ದಾಸರ ಯಜಮಾನಿಯರು ಆಗಿರಬಲ್ಲರು. ಪುರುಷರು ಏಕಕಾಲದಲ್ಲಿ ಗಂಡಂದಿರು, ಪುತ್ರರು, ಮತ್ತು ದಾಸರ ಯಜಮಾನರು ಆಗಿರಬಲ್ಲರು. ಒಬ್ಬನೇ ವ್ಯಕ್ತಿಯು ಒಂದು ಸಂಬಂಧದೊಳಗೆ ಉನ್ನತ ಸ್ಥಾನದಲ್ಲಿ ಮತ್ತು ಇನ್ನೊಂದು ಸಂಬಂಧದೊಳಗೆ ಅಲ್ಪ ಸ್ಥಾನದಲ್ಲಿ ಇರಬಹುದಾಗಿದೆ" (David M. Hay, *Colossians*, Abingdon New Testament Commentaries [Nashville: Abingdon Press, 2000], 140). [2]ಗಳನ್ನು ಸಹ ನೋಡಿರಿ ಎಫೆಸ 5:22-6:9; ತೀತನಿಗೆ 2:2-10; 1 ಪೇತ್ರ 2:13-3:7. [3]Robert G. Bratcher and Eugene A. Nida, *A Translators Handbook on Paul's Letters to the Colossians and to Philemon,* Helps for Translators (New York: United Bible Societies, 1977), 92. [4]Peter T. O'Brien, *Colossians, Philemon,* Word Biblical Commentary, vol. 44 (Waco, Tex.: Word Books, 1982), 224. [5]ಗಳನ್ನು ಸಹ ನೋಡಿರಿ ಮತ್ತಾಯ 4:4; ರೋಮಾ 7:17; 1 ರೋಮಾ 1:17; 1 ತಿಮೊಥೆ 4:12; 1 ಪೇತ್ರ 3:3, 4. [6]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans

Publishing Co., 1957), 294. [7]ನೋಡಿರಿ ಮತ್ತಾಯ 26:20; ಮಾರ್ಕ 14:17; ಲೂಕ 22:14; ಯೋಹಾನ 13:2, 4. [8]Eduard Schweizer, *The Letter to the Colossians: A Commentary*, trans. Andrew Chester (Zürich: Benziger Verlag, 1976; reprint, Minneapolis: Augsburg Publishing House, 1982), 219. [9]Ross Shepard Kraemer and Mary Rose D'Angelo, *Women and Christian Origins* (New York: Oxford University Press, 1999), 86. [10]Valerie A. Abrahamsen, *Women and Worship at Philippi: Diana/Artemis and Other Cults in the Early Christian Era* (Portland, Maine: Astarte Shell Press, 1995), 194.

[11]William Baird, *The Corinthian Church—A Biblical Approach to Urban Culture* (New York: Abingdon Press, 1964), 121–22.